# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಅಕ್ಟೋಬರ್ 08, 2021

ಸಂಪುಟ : 48 ಸಂಚಿಕೆ : 148 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com








1. ಮೈಸೂರು ದಸರಾಕ್ಕೆ ಮಾಜಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರು ಬೆಳ್ಳಿ ರಥದಲ್ಲಿರುವ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಧ್ಯುಕ್ತವಾಗಿ ಚಾಲನೆ ನೀಡಿದರು. 2. ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಕುಟುಂಬದವರು ಶ್ರೀ ದೇವಿಗೆ ಪೂಜೆ ಸಲ್ಲಿಸಿ ದಸರಾಗೆ ಚಾಲನೆ ನೀಡಿದರು. 3. ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಆವರಗೊಳ್ಳದ ಶ್ರೀಗಳು ದುರ್ಗಾದೇವಿ ಘಟ ಸ್ಥಾಪನೆ ಮಾಡುವ ಮೂಲಕ ನವರಾತ್ರಿ ಉತ್ಸವಕ್ಕೆ ಚಾಲನೆ ನೀಡಿದರು.

## ರಾಜ್ಯದ 50 ಕೇಂದ್ರಗಳಲ್ಲಿ ಐಟಿ ದಾಳಿ

### ಬಿಎಸ್‌ವೈ ಆಪ್ತ ಸೇರಿ 30 ಗುತ್ತಿಗೆದಾರರ ಮನೆ, ಕಚೇರಿಗಳ ಪರಿಶೀಲನೆ

ಬೆಂಗಳೂರು, ಅ. 7 - ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಆಪ್ತ ಸಹಾಯಕ ಉಮೇಶ್, ಅರವಿಂದ್ ಸೇರಿದಂತೆ 30ಕ್ಕೂ ಹೆಚ್ಚು ದೊಡ್ಡ ಗುತ್ತಿಗೆದಾರರ ನಿವಾಸ ಮತ್ತು ಕಚೇರಿಗಳ ಮೇಲೆ ಆದಾಯ ತೆರಿಗೆ ದಾಳಿ ನಡೆಸಿದೆ.

ರಾಜಧಾನಿ, ಶಿವಮೊಗ್ಗ, ಬಾಗಲಕೋಟೆ ಸೇರಿದಂತೆ ರಾಜ್ಯದ 50 ಕೇಂದ್ರಗಳಲ್ಲಿ ಏಕಕಾಲಕ್ಕೆ ಗೋವಾದಿಂದ ಬಂದಿದ್ದ ಕೇಂದ್ರ ಆದಾಯ ತೆರಿಗೆ ಇಲಾಖಾಧಿಕಾರಿಗಳು ದಾಳಿ ನಡೆಸಿ, ಭಾರೀ ಪ್ರಮಾಣದಲ್ಲಿ ಆಸ್ತಿಪಾಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ವಶಪಡಿಸಿಕೊಂಡು ಕೆಲವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದ್ದಾರೆ.

ಯಡಿಯೂರಪ್ಪ ಅವರು ಅಧಿಕಾರದಿಂದ ಕೆಳಗಿಳಿ ದು ಎರಡು ತಿಂಗಳಲ್ಲೇ ಕೇಂದ್ರ ಎಚ್ಚರಿಕೆ ನೀಡಿದೆ. ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಯಾವುದೇ ರೀತಿಯ ಆತಂಕಗಳು ಎದುರಾಗದಂತೆ ನೋಡಿಕೊಳ್ಳು ವುದು ಮತ್ತು ಮುಂಬರುವ ವಿಧಾನಸಭಾ ಚುನಾವಣೆ

### ರಾಜಕೀಯ ಕಾರಣಕ್ಕಾಗಿ ದಾಳಿ ನಡೆದಿಲ್ಲ : ಯಡಿಯೂರಪ್ಪ

ಬೆಂಗಳೂರು, ಅ. 7 – ತಮ್ಮ ಆಪ್ತ ಸಹಾಯಕ ಉಮೇಶ್ ನಿವಾಸದ ಮೇಲೆ ನಡೆದಿರುವ ದಾಳಿಗೂ ಉಪ ಚುನಾವಣೆಗೂ ಸಂಬಂಧವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

**ನೀರಾವರಿ ಕಿಕ್‌ಬ್ಯಾಕ್ ಹಿನ್ನೆಲೆಯಲ್ಲಿ ಐ.ಟಿ. ದಾಳಿ - ವಿಶ್ವನಾಥ್**

ನೀರಾವರಿ ಇಲಾಖೆಯ ಗುತ್ತಿಗೆದಾರರು, ಪೂರೈಕೆದಾರರನ್ನು ಗುರಿಯಾಗಿಟ್ಟು ಕೊಂಡು ಗುರುವಾರ ನಡೆದ ಐ.ಟಿ. ದಾಳಿಗೆ ಸಂಬಂಧಿಸಿದಂತೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುತ್ತಿದ್ದ ಅವರು, ಉಮೇಶ್ ನನ್ನ ಜೊತೆ ಕೆಲಸ ಮಾಡಿದ್ದಾರೆ. ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜೊತೆ ಕೆಲಸ ಮಾಡಿಲ್ಲ. ನಾಳೆ ಸತ್ಯ ಹೊರ ಬರಲಿದೆ ಎಂದಿದ್ದಾರೆ. ಆದಾಯ ತೆರಿಗೆ ಇಲಾಖೆಗಳು ತಪ್ಪು ಮಾಡಿದ ಯಾರನ್ನೂ ಬಿಡುವುದಿಲ್ಲ. (2ನೇ ಪುಟಕ್ಕೆ)

## ದುಗ್ಗಮ್ಮನ ದೇವಸ್ಥಾನದಲ್ಲಿ ದಸರಾ ಉತ್ಸವಕ್ಕೆ ಚಾಲನೆ

ದಾವಣಗೆರೆ,ಅ.7 - ಜಿಲ್ಲೆಯಲ್ಲಿ ಕೊರೊನಾ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ನಾಡ ಹಬ್ಬ ಶರನ್ನವರಾತ್ರಿ ಉತ್ಸವದ ಸಂಭ್ರಮಕ್ಕೆ ಪುಷ್ಠಿ ಸಿಕ್ಕಿದಂತಾಗಿದ್ದು, ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ದಸರಾ ಮಹೋತ್ಸವಕ್ಕೆ ಇಂದು ಚಾಲನೆ ನೀಡಲಾಯಿತು.

ಹಿರಿಯ ಶಾಸಕರೂ ಆಗಿರುವ ದೇವಸ್ಥಾನದ ಧರ್ಮದರ್ಶಿಗಳ ಟ್ರಸ್ಟ್ ಗೌರವಾಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಅವರ ಕುಟುಂಬ ವರ್ಗದವರು ದಸರಾ ಉತ್ಸವವನ್ನು ಉದ್ಘಾಟಿಸಿದರು.

ಇಂದು ಮುಂಜಾನೆ ದೇವಸ್ಥಾನಕ್ಕೆ ಆಗಮಿಸಿದ ಎಸ್ಸೆಸ್ ಮತ್ತು ಅವರ ಪರಿವಾರದವರು ಶ್ರೀ ದೇವಿಗೆ ಪೂಜೆ ಸಲ್ಲಿಸಿ ದೀಪ ಬೆಳಗಿಸಿದರು.

ವಿಶ್ವಾದ್ಯಂತ ತಲ್ಲಣಗೊಳಿಸಿದ್ದ, ಮನುಕುಲಕ್ಕೆ ದೊಡ್ಡ ಗಂಡಾಂತರ ತಂದೊಡ್ಡಿದ್ದ ಕೊರೊನಾದಿಂದ ಎಲ್ಲರನ್ನೂ ಪಾರು ಮಾಡಿ, ಪ್ರತಿಯೊಬ್ಬರಿಗೂ ಸುಖ-ಶಾಂತಿ-ನೆಮ್ಮದಿಯನ್ನು ನೀಡುವಂತೆ ಎಸ್ಸೆಸ್ ಅವರು ಶ್ರೀ ದೇವಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಮಾಜಿ ಸಚಿವರೂ ಆಗಿರುವ ದೇವಸ್ಥಾನದ ಧರ್ಮದರ್ಶಿಗಳ ಟ್ರಸ್ಟ್ ಕಾರ್ಯಾಧ್ಯಕ್ಷ ಶಾಮನೂರು ಮಲ್ಲಿಕಾರ್ಜುನ್, ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಶ್ರೀಮತಿ ರೇಖಾ ಗಣೇಶ್, ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್, ಶ್ರೀಮತಿ ಪ್ರೀತಿ ಬಕ್ಕೇಶ್ ಮತ್ತಿತರರು ಶ್ರೀ ದೇವಿಗೆ ಪೂಜೆ ಸಲ್ಲಿಸಿದರು.

ದೇವಸ್ಥಾನ ಧರ್ಮದರ್ಶಿಗಳ ಟ್ರಸ್ಟ್ ಟ್ರಸ್ಟಿಗಳಾದ ಗೌಡ್ರ ಚನ್ನಬಸಪ್ಪ, ಹನುಮಂತರಾವ್ ಸಾವಂತ್, ಹೆಚ್.ಬಿ. ಗೋಣಪ್ಪ, ಬಿ.ಹೆಚ್. ವೀರಭದ್ರಪ್ಪ, ಹನುಮಂತರಾವ್ ಜಾಧವ್, ಉಮೇಶರಾವ್ ಸಾಳಂಕಿ, ಜೆ.ಕೆ. ಕೊಟ್ರಬಸಪ್ಪ, ಬಡಗಿ ರಾಮಣ್ಣ, ಗುರುರಾಜ್ ಸೊಪ್ಪಿನ, ಬಾಬು, ಕವಿರಾಜ್, ರವಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನೀಟ್ : 8 ಲಕ್ಷ ರೂ.ಗಳ ಆರ್ಥಿಕ ಮಿತಿ ಪ್ರಶ್ನಿಸಿದ ಸುಪ್ರೀಂ

ನವದೆಹಲಿ, ಅ. 7 – ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ನೀಟ್ ಪರೀಕ್ಷೆಯಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೀಸಲಾತಿ ಪಡೆಯಲು 8 ಲಕ್ಷ ರೂ.ಗಳ ವಾರ್ಷಿಕ ಆದಾಯದ ಮಿತಿ ನಿಗದಿ ಪಡಿಸಿರುವುದಕ್ಕೆ ಏನು ಆಧಾರ ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಯಾವ ಆಧಾರದ ಮೇಲೆ ಎಂಟು ಲಕ್ಷ ರೂ.ಗಳ ಆದಾಯದ ಮಿತಿ ನಿಗದಿ ಪಡಿಸಿ ಆರ್ಥಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಲಾಗುತ್ತಿದೆ? ಎಂದು ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಇಲಾಖೆ ಮತ್ತು ಸಿಬ್ಬಂದಿ ಹಾಗೂ ತರಬೇತಿ ಸಚಿವಾಲಯಗಳಿಗೆ ನ್ಯಾಯಾಲಯ ಪ್ರಶ್ನಿಸಿದೆ.

**ಕೆನೆಪದರದ ಮಿತಿಯನ್ನು ಆರ್ಥಿಕ ಹಿಂದುಳಿದಿರುವಿಕೆಗೆ ಅನ್ವಯಿಸುವುದು ಸೂಕ್ತವಾಗದು**

ರಾಷ್ಟ್ರೀಯ ಜೀವನ ವೆಚ್ಚ ಸೂಚ್ಯಂಕ ಆಧರಿಸಿ ವಾರ್ಷಿಕ ಎಂಟು ಲಕ್ಷ ರೂ.ಗಳ ಮಿತಿ ನಿಗದಿ ಪಡಿಸಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

ಈ ವಿಷಯದ ಬಗ್ಗೆ ಏನಾದರೂ ಚರ್ಚೆ ನಡೆದಿದೆಯೇ ಅಥವಾ ಇತರೆ ಹಿಂದುಳಿದ ವರ್ಗಗಳ ಕೆನೆ ಪದರ ಮಿತಿಯ ಆಧಾರದ ಮೇಲೆ ಆರ್ಥಿಕ ಹಿಂದುಳಿದಿರುವಿಕೆಯನ್ನು ನಿಗದಿ ಪಡಿಸಲಾಗಿದೆಯೇ? (2ನೇ ಪುಟಕ್ಕೆ)

## ಎಲ್‌ಐಸಿಗೆ 1.81 ಕೋ.ರೂ. ವಂಚಿಸಿದ ಏಜೆಂಟ್

ಭುವನೇಶ್ವರ, ಅ. 7- ಮೃತ ವ್ಯಕ್ತಿಗಳ ಹೆಸರಿಗೆ ಪಾಲಿಸಿ ಬಿಡುಗಡೆ ಮಾಡಿ 1.81 ಕೋಟಿ ರೂ. ವಂಚಿಸಿದ ಆರೋಪದ ಮೇಲೆ ಎಲ್.ಐ.ಸಿ. ಏಜೆಂಟ್ ಒಬ್ಬರನ್ನು ಒಡಿಶಾ ಆರ್ಥಿಕ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ. ಕಬಿರಾಜ್ ಬೆಹೆರಾ ಎಂಬ ಏಜೆಂಟ್ ಈ ಕೃತ್ಯ ಎಸಗಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಖುರ್ದಾ ಶಾಖೆಯ ಅಧಿಕಾರಿಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಬೆಹೆರಾ ಅವರನ್ನು ಬಂಧಿಸಲಾಗಿದೆ.

ಈ ಬಗ್ಗೆ ವಿವರ ನೀಡಿರುವ ಪೊಲೀಸ್ ವರಿಷ್ಠಾಧಿಕಾರಿ ಡಿ.ಕೆ. ತ್ರಿಪಾಠಿ, ಮೃತರ ಹೆಸರಿನಲ್ಲಿ ಸುಳ್ಳು ಕ್ಲೇಮ್ ಮಾಡಿ, ನಂತರ ನಾಮಿನಿಗಳ ಜೊತೆ ಸೇರಿಕೊಂಡು ಎಲ್.ಐ.ಸಿ.ಗೆ 1.18 ಕೋಟಿ ರೂ ವಂಚನೆ ಮಾಡಲಾಗಿದೆ ಎಂದಿದ್ದಾರೆ.

2013ರಿಂದ 2019ರ ನಡುವೆ (2ನೇ ಪುಟಕ್ಕೆ)

## ರೈಲ್ವೆ: ಮಾಸ್ಕ್ ದಂಡ ಮುಂದುವರಿಕೆ

ನವದೆಹಲಿ, ಅ. 7 – ರೈಲ್ವೆ ತಾಣಗಳಲ್ಲಿ ಮಾಸ್ಕ್ ಧರಿಸದವರಿಗೆ 500 ರೂ.ಗಳವರೆಗೆ ದಂಡ ವಿಧಿಸುವುದನ್ನು ಮುಂದುವರೆಸಲು ರೈಲ್ವೆ ಮಂಡಳಿ ನಿರ್ಧರಿಸಿದೆ. ರೈಲ್ವೆ ಮಂಡಳಿ ಆದೇಶ ಈ ಹಿಂದೆ ಸೆಪ್ಟೆಂಬರ್‌ವರೆಗೆ (2ನೇ ಪುಟಕ್ಕೆ)


You can get a
FREE MEDICAL
seat in 2022.
WhatsApp your Name
to 8073054295
or Scan this QR Code



ಆರ್.ಟಿ. ಪ್ರಶಾಂತ್‌ರವರಿಗೆ ಜನ್ಮದಿನದ ಶುಭಾಶಯಗಳು

ದಿನಾಂಕ 8.10.2021ರಂದು
ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಯುವ ಘಟಕದ ಅಧ್ಯಕ್ಷರೂ ಹಾಗೂ ಹರಿಹರದ ಎಸ್.ಜೆ.ವಿ.ಪಿ. ವಿದ್ಯಾಸಂಸ್ಥೆ ಆಡಳಿತ ಮಂಡಳಿಯ ಕಾರ್ಯದರ್ಶಿಗಳೂ, ನಮ್ಮ ಆತ್ಮೀಯರೂ ಆದ
ಶ್ರೀ ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಶ್ರೀಯುತರಿಗೆ ಭಗವಂತನು ಆಯುರಾರೋಗ್ಯ, ಐಶ್ವರ್ಯ, ಭಾಗ್ಯಗಳನ್ನು ಕರುಣಿಸಲಿ ಎಂದು ಹಾರೈಸುವ...



ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ
ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಯುವ ಘಟಕ ಹಾಗೂ ಕಾರ್ಯದರ್ಶಿಗಳು, ಆಡಳಿತ ಮಂಡಳಿ, ಎಸ್.ಜೆ.ವಿ.ಪಿ. ವಿದ್ಯಾಸಂಸ್ಥೆ, ಹರಿಹರ.



ಶ್ರೀ ಕೆ. ಚಂದ್ರಪ್ಪ
ಮಾಲೀಕರು,
ಶ್ರೀ ದುರ್ಗಾಂಬಿಕಾ ವೈನ್ಸ್, ನಿಟುವಳ್ಳಿ.



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಎಸ್.ಬಿ. ವೀರೇಶ್
(ಜನನ : 22.05.1955, ಮರಣ : 04.10.2021)
ಶ್ರೀ ಸಿದ್ದಲಿಂಗೇಶ್ವರ ದೇವಸ್ಥಾನದ ಕಾರ್ಯದರ್ಶಿಗಳು
ಹಿರಿಯ ರಂಗಭೂಮಿ ಕಲಾವಿದರು, ವಿಜಯನಗರ ಜಿಲ್ಲೆ, ಹೂವಿನಹಡಗಲಿ ತಾಲ್ಲೂಕು, ಹೊಳಗುಂದಿ
"ಜನನ ಆಕಸ್ಮಿಕ, ಮರಣ ನಿಶ್ಚಿತ ನೆನಪೊಂದೇ ಶಾಶ್ವತ"

ದಿನಾಂಕ : 04.10.2021ನೇ ಸೋಮವಾರ ನಮ್ಮ ಪೂಜ್ಯ ಅಣ್ಣನವರಾದ ಶ್ರೀ ಎಸ್.ಬಿ. ವೀರೇಶ್ ಹೊಳಗುಂದಿ ಇವರು ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ : 08.10.2021ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಹೊಳಗುಂದಿಯ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ಆದ್ದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕೆಂದು ವಿನಂತಿ.

ಇಂತಿ ದುಃಖತಪ್ತರು :
ಪತ್ನಿ: ಶ್ರೀಮತಿ ನಾಗರತ್ನಮ್ಮ, ಮಕ್ಕಳು, ಮತ್ತು ಅಳಿಯಂದಿರು ಎಸ್.ಬಿ. ದಿವಾಕರ, ಹಾಗೂ ಸಹೋದರ, ಸಹೋದರಿಯರು ಮತ್ತು ಅಳಿಯಂದಿರು ಹಾಗೂ ಎಸ್.ಬಿ. ಬಂಧು-ಮಿತ್ರರು, ಫೋ. : 9980170435



ದ್ವಿತೀಯ ಪುಣ್ಯಸ್ಮರಣೆ



ಜನನ : 18.07.1964
ಮರಣ : 08.10.2019

ದಿ॥ ಎಸ್. ಕೋಟೆಪ್ಪನವರು
ಮುಖ್ಯ ಇಂಜಿನಿಯರ್ (ವಿ), ಕಂಪನಿ ಕಾರ್ಯಾಲಯ, ಬೆಸ್ಕಾಂ, ಬೆಂಗಳೂರು.

ನೀವು ನಮ್ಮನ್ನಗಲಿ 8.10.2021ಕ್ಕೆ ಎರಡು ವರ್ಷಗಳಾದವು. ದೈವಭಕ್ತರಾಗಿ, ಶಿಸ್ತು, ಸರಳತೆ, ಸೌಜನ್ಯತೆ ಸಾರಿ, ಪ್ರೀತಿ, ವಾತ್ಸಲ್ಯದ ಪ್ರತೀಕವಾಗಿ ನಮ್ಮೆಲ್ಲರಿಗೂ ಸ್ಫೂರ್ತಿಯ ಸೆಲೆಯಾದ ನಿಮ್ಮ ಪರೋಪಕಾರಿ ಜೀವನ, ನಡೆ-ನುಡಿ ಆದರ್ಶಗಳೇ ನಮ್ಮ ಬಾಳಿನ ಸ್ಫೂರ್ತಿ, ನಿಮ್ಮ ನೆನಪು ನಮ್ಮ ಜೀವನದಲ್ಲಿ ಸದಾ ಹಚ್ಚಹಸಿರಾಗಿದೆ. ಭಗವಂತನು ತಮ್ಮ ದಿವ್ಯಾತ್ಮಕ್ಕೆ ಸದ್ಗತಿ ಕರುಣಿಸಲೆಂದು ಪ್ರಾರ್ಥಿಸುವ
ಸದಾ ನಿಮ್ಮ ನೆನಪಿನಲ್ಲಿರುವ
ಇಜಾರಿ ವಾಸುಪಾಲ್
ನಿವೃತ್ತ ಕಿರಿಯ ಇಂಜಿನಿಯರ್, (ವಿ), ಬೆ.ವಿ.ಕಂ. ದಾವಣಗೆರೆ
ಮೊ: 94485 88899





www.sulthandiamondsandgold.com
Ec/sulthandiamondsandgold

ಹಳೆಯ ಚಿನ್ನಾಭರಣದ ವಿನಿಮಯ ಆಫರ್

ಯಾವುದೇ ಆಭರಣ ಮಳಿಗೆಯಿಂದ ಖರೀದಿಸಿದ ಯಾವುದೇ ಶುದ್ಧತೆಯ ಆಭರಣವನ್ನು 22 ಕ್ಯಾರೆಟ್ BIS HUID ಹಾಲ್ ಮಾರ್ಕ್‌ಡ್ ಹೊಸ ಚಿನ್ನಾಭರಣಗಳೊಂದಿಗೆ ವಿನಿಮಯ ಮಾಡಿಕೊಳ್ಳಿ
+
50% ರಿಯಾಯಿತಿ ಹೊಸ ಆಭರಣಗಳ ತಯಾರಿಕಾ ವೆಚ್ಚದ ಮೇಲೆ, ವಿನಿಮಯ ಮಾಡಿದ ತೂಕಕ್ಕೆ ಸಮಾನಾಗಿ

31 ಅಕ್ಟೋಬರ್ ತನಕ

BIS HUID Hallmarked 916 Gold

SULTHAN® DIAMONDS & GOLD
BEGINNING OF CELEBRATIONS
SINCE 1992

DAVANAGERE
OPP: RMC LINK ROAD, P. B. ROAD.
PH: 08192 251916, 252916
ALSO AT: BENGALURU (ULSOOR ROAD, JAYANAGAR) • MANGALORE • UDUPI SURATHAKAL • KASARAGOD • KANHANGAD • SHIVAMOGGA



ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥
ಶ್ರೀಮತಿ ಶ್ರೀ ಎಸ್.ಕೆ. ರವಿ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 5.10.2021ನೇ ಮಂಗಳವಾರ ಬೆಳಗ್ಗೆ 7 ಗಂಟೆಗೆ ನನ್ನ ಪೂಜ್ಯ ತಂದೆಯವರಾದ
ಶ್ರೀ ಎಸ್.ವಿ. ಕಾಂತಪ್ಪನವರು
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆ ಯನ್ನು
ದಿನಾಂಕ 9.10.2021ನೇ ಶನಿವಾರ ಮಧ್ಯಾಹ್ನ 12ಕ್ಕೆ
ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು
ಶ್ರೀ ಕ್ಷೇತ್ರ ಆವರಗೊಳ್ಳ ಇವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಸ್ಥಳ: ಸುಕೃತೀಂದ್ರ ಕಲಾಮಂದಿರ, ಎಂ.ಸಿ.ಸಿ 'ಎ' ಬ್ಲಾಕ್, ದಾವಣಗೆರೆ
ಇಂತಿ ದುಃಖತಪ್ತ ಕುಟುಂಬ ವರ್ಗ: ಶ್ರೀಮತಿ ವೀಣಾ ಮತ್ತು ಶ್ರೀ ಎಸ್.ಕೆ ರವಿ ಮತ್ತು ಮಕ್ಕಳು ಸಹೋದರಿಯರು, ಅಳಿಯಂದಿರುಗಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಕಾರಿಗನೂರು ವಂಶಸ್ಥರು ಹಾಗೂ ಬಂಧು ಮಿತ್ರರು. ಕೆ. ಎಸ್. ವೈನ್ ಲ್ಯಾಂಡ್, ಶ್ರೀ ರಂಗ ಬಾರ್, ದಾವಣಗೆರೆ, ವಿನಾಯಕ ವೈನ್ಸ್ ಕೂಡ್ಲಿಗೆರೆ, ಭದ್ರಾವತಿ ತಾ. ಮೊ: 94481 54604
ವಿ. ಸೂ: ಆಹ್ವಾನ ಪತ್ರಿಕೆ ತಲುಪದವರು ಇದನ್ನೆ ಆಹ್ವಾನವೆಂದು ತಿಳಿದು ಈ ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ

# ರಕ್ತ ಚರಿತ್ರೆ ಬರೆಯಲು ಹೊರಟಿರುವ ಕೇಂದ್ರ ಸರ್ಕಾರ

## ಸಾಮರಸ್ಯ ನಡಿಗೆ ಕಾರ್ಯಕ್ರಮದಲ್ಲಿ ಕಿಡಿ ಕಾರಿದ ಹರಪನಹಳ್ಳಿಯ ಎಂ.ಪಿ. ಲತಾ ಮಲ್ಲಿಕಾರ್ಜುನ್



ಹರಪನಹಳ್ಳಿ, ಅ.7- ರೈತ ವಿರೋಧಿ ಕೇಂದ್ರ ಸರ್ಕಾರ, ರೈತರನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲುವ ಮೂಲಕ ರಕ್ತ ಚರಿತ್ರೆ ಬರೆಯಲು ಹೊರಟಿದೆ. ದೇಶಕ್ಕೆ ಅನ್ನ ನೀಡುವ ರೈತರಿಗೆ ಪ್ರಾಣ ಭಯ ಕಾಡುವಂತಹ ಪರಿಸ್ಥಿತಿಯನ್ನು ಬಿಜೆಪಿ ನಿರ್ಮಾಣ ಮಾಡಿದೆ ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಕಾಂಗ್ರೆಸ್ ಪಕ್ಷವು ಮಹಾತ್ಮಗಾಂಧಿ ಜಯಂತಿ ಅಂಗವಾಗಿ ಹಮ್ಮಿಕೊಂಡಿರುವ ಸಾಮರಸ್ಯ ನಡಿಗೆ ಕಾರ್ಯಕ್ರಮದ ನಿಮಿತ್ತ 'ಗಾಂಧಿ ನಡಿಗೆ ಗ್ರಾಮ ಸ್ವರಾಜ್ಯದ ಕಡೆಗೆ' ಎನ್ನುವ ಘೋಷವಾಕ್ಯದೊಂದಿಗೆ ಕಡಬಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಜೋಷಿಲಿಂಗಾಪುರ ಗ್ರಾಮದಿಂದ ಕಡಬಗೆರೆ ಗ್ರಾಮದವರೆಗೆ ನಡೆದ ಪಾದಯಾತ್ರೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.

ಮೃತ ರೈತ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಲು ಹೋಗುವ ನಾಯಕರನ್ನು ಬಲವಂತವಾಗಿ ಬಂಧಿಸಲಾಗುತ್ತಿದೆ. ದೇಶದಲ್ಲಿ ಕಾನೂನು ಇದೆಯಾ? ಎನ್ನುವ ಪ್ರಶ್ನೆ ಮೂಡುತ್ತಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ. ಜನಸಾಮಾನ್ಯರು ಜೀವನ ನಡೆಸುವುದೇ ದುಸ್ತರವಾಗಿದೆ. ಬೆಲೆ ಏರಿಕೆ ಬಗ್ಗೆ ತುಟಿ ಬಿಚ್ಚದ ಬಿಜೆಪಿ ನಾಯಕರು ಹಿಂದುತ್ವ, ಪಾಕಿಸ್ತಾನ, ಭಯೋತ್ಪಾದನೆ, ರಾಷ್ಟ್ರೀಯತೆ ಎನ್ನುವ ಭಾವನಾತ್ಮಕ ವಿಷಯಗಳನ್ನು ಜನರಿಗೆ ಬಿತ್ತುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಲತಾ ಅವರು ಹರಿಹಾಯ್ದರು.

ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಮತ್ತೂರು ಬಸವರಾಜ್, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಹೆಚ್. ಶಿವರಾಜ್, ಉಪಾಧ್ಯಕ್ಷ ನಾಗರಾಜ್, ರವಿ ಯುವ ಶಕ್ತಿ ಪಡೆ ಅಧ್ಯಕ್ಷ ಉದಯಶಂಕರ್, ಕಡಬಗೆರೆ ಗ್ರಾ.ಪಂ. ಅಧ್ಯಕ್ಷೆ ಅನುಷಾ ಮಂಜುನಾಥ, ನಂದಿಬೇವೂರು ಗ್ರಾ.ಪಂ. ಉಪಾಧ್ಯಕ್ಷೆ ಲಕ್ಷ್ಮಿ ಚಂದ್ರಶೇಖರ್, ಮುಖಂಡ ಬಿ.ಪಿ. ಬಸವರಾಜ್ ಮಾತನಾಡಿದರು.

ಕಡಬಗೆರೆ ಗ್ರಾ.ಪಂ. ಉಪಾಧ್ಯಕ್ಷರಾದ ಮಂಜಮ್ಮ, ಸದಸ್ಯರಾದ ಗೀತಾ ತಿರುಪತಿ, ತಾ.ಪಂ. ಮಾಜಿ ಅಧ್ಯಕ್ಷೆ ಭಾಗ್ಯಮ್ಮ ಮಲ್ಲಿಕಾರ್ಜುನ್, ತಾ.ಪಂ. ಮಾಜಿ ಸದಸ್ಯೆ ಕಂಚಿಕೇರಿ ಜಯಲಕ್ಷ್ಮಿ, ಸಹನಾ ಗೊಂಗಡಿ ನಾಗರಾಜ್, ಉಮಾ ಶಂಕರ್, ಕಸವನಹಳ್ಳಿ ಮಂಜುನಾಥ, ಹಳೇಮನೆ ಲಕ್ಷ್ಮಣ್, ದೇವೀರಮ್ಮ, ಮೈದೂರು ರಾಮಪ್ಪ, ಹಿಕ್ಕಿಂಗೆರೆ ವಸಂತಪ್ಪ, ಭಂಗಿ ತಿಮ್ಮಪ್ಪ, ಬಸವಂತಪ್ಪ, ಭಂಗಿ ಮಲ್ಲಿಕಾರ್ಜುನ್, ಬಿ.ಎಸ್. ಮಂಜುನಾಥ್, ಕಡಬಗೆರೆ ಅಶೋಕ್, ಪ್ರಸಾದ್ ಕವಾಡಿ, ಗೌಡ್ರ ಚಂದ್ರಪ್ಪ, ಬಡಿಗೇರ ಹನುಮಂತಪ್ಪ, ಚಂದ್ರಪ್ಪ ಇನ್ನಿತರರಿದ್ದರು.

# 135 ಕೋಟಿ ಜನರ ನೆಮ್ಮದಿಗೆ ದೇಶದ ಸಾಹಿತ್ಯ, ಸಂಸ್ಕೃತಿಯ ಕೊಡುಗೆ ಅಪಾರ



**ಹೊನ್ನಾಳಿ ಹಿರೇಕಲ್ಮಠದಲ್ಲಿನ ಶರನ್ನವರಾತ್ರಿ ಮಹೋತ್ಸವದಲ್ಲಿ ಹನಗವಾಡಿ ವೀರೇಶ್ ಅಭಿಮತ**

ಹೊನ್ನಾಳಿ, ಅ.7- ವಿಶ್ವಕ್ಕೆ ಮಾದರಿಯಾದ ಮೈಸೂರು ದಸರಾ ಭವ್ಯ ಸಂಸ್ಕೃತಿಯ ನಾಡಿನಲ್ಲಿ ನಾವಿದ್ದೇವೆ ಎಂಬುದು ಹೆಚ್ಚು ಹರ್ಷ ತರುವಂತಾಗಿದ್ದು. ದೇಶದ 135 ಕೋಟಿ ಜನರ ನೆಮ್ಮದಿಗೆ ಮಠ ಮಾನ್ಯಗಳ, ಸಂಸ್ಕೃತಿ,ಸಾಹಿತ್ಯದ ಕೊಡುಗೆ ಅಪಾರ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಹೇಳಿದರು.

ಇಲ್ಲಿನ ಹಿರೇಕಲ್ಮಠದ ಶರನ್ನವರಾತ್ರಿ ಮತ್ತು ದಸರಾ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾವು ಹೊನ್ನಾಳಿ ತಾಲ್ಲೂಕಿನ ಮೊಮ್ಮಗ, ನಮ್ಮ ಅಜ್ಜಿ ಊರು ತಾಲ್ಲೂಕಿನ ಮಲ್ಲಿಗೇನಹಳ್ಳಿ ಎಂಬುದನ್ನು ಸ್ಮರಿಸಿದ ಅವರು, ಎಲ್ಲ ಮಠಗಳಂತೆ ಹೊನ್ನಾಳಿ ಮಠದ ಕೊಡುಗೆಯು ಅಪಾರವಾಗಿದೆ. ಪ್ರತಿ ವರ್ಷದ ಇಲ್ಲಿನ ದಸರಾ ಮಹೋತ್ಸವಕ್ಕೆ ತಾವು ಬರುವುದಾಗಿ ತಿಳಿಸಿದರು.

ಮೊಬೈಲ್, ಟಿವಿ ಇನ್ನಿತರೆ ಮಾಧ್ಯಮಗಳು ಮನಸ್ಸನ್ನು ಕೆರಳಿಸಿದರೆ ದಸರಾ ಸಂಸ್ಕೃತಿ ಆಚರಣೆಯು ನಮ್ಮ ಮನವನ್ನು ಅರಳಿಸುತ್ತದೆ ಎಂಬುದಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯದ ಡಾ. ಶಶಿಕರ್ ಮಾತನಾಡಿ, ಕೊರೊನಾ ಸಂಕಷ್ಟದ ದಿನಗಳಲ್ಲಿ ಹೊಟ್ಟೆ ತುಂಬಿಸುವ ಹಾಗು ಕೃಷಿ ಕ್ಷೇತ್ರದ ಚಟುವಟಿಕೆಗಳು ಮಾತ್ರ ತಟಸ್ಥವಾಗಿಸಲು ಸಾಧ್ಯವಾಗಲಿಲ್ಲ. ಕೃಷಿ ಹಾಗು ಕೃಷಿಕ ಸಂಸ್ಕೃತಿಯ ಭವ್ಯ ಪರಂಪರೆಯನ್ನು ವಿವರಿಸಿ ಪಟ್ಟಣದ ಸಂಸ್ಕೃತಿ ಬಿಟ್ಟು ನೆಮ್ಮದಿಯ ಹಳ್ಳಿ ಸಂಸ್ಕೃತಿಗೆ ಮನಸ್ಸು ಮಾಡುವವರ ಸಂಖ್ಯೆ ಹೆಚ್ಚುತ್ತಿದೆ ಎಂದರು.

ಡಾ. ಪ್ರವೀಣ್ ದೊಡ್ಡಗೌಡರ ಇವರಿಂದ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಹಿರೇಮಠದ ಹೆಚ್. ರಾಜಪ್ಪ, ಸೆನೆಟ್ ಸದಸ್ಯ ಹಳದಪ್ಪ, ಬಿಸಾಟಿ ನಾಗರಾಜ್, ಅಂದಾನಿ ಗಂಗಾಧರ, ಹರಿಹರದ ಅಣ್ಣೇಶ, ಹನುಮೇಗೌಡ, ರಾಜು ಪೂಜಾರ ಇನ್ನಿತರರು ಉಪಸ್ಥಿತರಿದ್ದರು.

ಸಾನ್ನಿಧ್ಯ ವಹಿಸಿದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಚನ್ನಯ್ಯ ಬೆನ್ನೂರ್ ಮಠ ಮಾತನಾಡಿದರು.

ಪುರಾಣ ಪ್ರವಚನವನ್ನು ಮಂಜುನಾಥ ದೇವರು ನಡೆಸಿಕೊಟ್ಟರು.ಚನ್ನಮಲ್ಲಿಕಾರ್ಜುನ ಪಾಠಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಅನ್ನದಾನಯ್ಯ ಶಾಸ್ತ್ರಿಗಳಿಂದ ವೇದಘೋಷ ನಡೆಯಿತು. ಕೋರಿ ಮಲ್ಲಿಕಾರ್ಜುನಪ್ಪ ಸ್ವಾಗತಿಸಿ, ನವುಲೆ ಗಂಗಾಧರ್ ಕಾರ್ಯಕ್ರಮ ನಿರೂಪಿಸಿದರು.

# ರಾಜಕೀಯ ಕಾರಣಕ್ಕಾಗಿ ದಾಳಿ ನಡೆದಿಲ್ಲ

**(1ನೇ ಪುಟದಿಂದ)** ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿದ್ದಾರೆ ಎಂದಿರುವ ಯಡಿಯೂರಪ್ಪ, ಆದಾಯ ತೆರಿಗೆ ಅಧಿಕಾರಿಗಳು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಹಾಜರಾಗಲು ಉಮೇಶ್‌ಗೆ ತಿಳಿಸಿದ್ದಾರೆ ಎಂದು ಮಾಧ್ಯಮಗಳಲ್ಲಿ ನೋಡಿದ್ದೇನೆ. ಆನಂತರ ದಾಳಿಯ ಹಿಂದಿನ ಸತ್ಯ ಹೊರ ಬರಲಿದೆ ಎಂದಿದ್ದಾರೆ.

ಉಪ ಚುನಾವಣೆಗಳು ಸಮೀಪಿಸುತ್ತಿರುವ ಬೆನ್ನಲ್ಲೇ ನಡೆದ ದಾಳಿಯ ಹಿಂದೆ ರಾಜಕೀಯ ಕಾರಣಗಳಿವೆಯೇ? ಎಂಬ ಪ್ರಶ್ನೆಗೆ ಉತ್ತರಿಸಿರುವ ಅವರು, ದಾಳಿಗೂ ರಾಜಕೀಯಕ್ಕೂ ಸಂಬಂಧ ಕಲ್ಪಿಸುವುದಿಲ್ಲ. ಐ.ಟಿ. ದಾಳಿಗಳು ಸಾಮಾನ್ಯವಾಗಿ ನಡೆಯುತ್ತವೆ. ಇದಕ್ಕೆ ಅನಗತ್ಯ ಕಾರಣಗಳನ್ನು ಹುಡುಕಬೇಕಿಲ್ಲ ಎಂದರು.

ಐಟಿ. ಇಲಾಖೆಯ ಮೂಲಗಳ ಪ್ರಕಾರ ನೀರಾವರಿ ಇಲಾಖೆಯ ಗುತ್ತಿಗೆದಾರರನ್ನು ಪ್ರಮುಖವಾಗಿ ಗುರಿಯಾಗಿಟ್ಟುಕೊಂಡು 50 ತಾಣಗಳಲ್ಲಿ ದಾಳಿ ನಡೆಸಲಾಗಿದೆ. ಕೆಲ ಲೆಕ್ಕ ಪರಿಶೋಧಕರ ನಿವಾಸಗಳ ಮೇಲೂ ದಾಳಿ ನಡೆದಿದೆ.

ದಾಳಿಯ ಬಗ್ಗೆ ಪ್ರತಿಕ್ರಿಯಿಸಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಯಡಿಯೂರಪ್ಪನವರನ್ನು ಹಿಡಿದಿಟ್ಟುಕೊಳ್ಳಲು ಈ ದಾಳಿ ನಡೆಸಲಾಗುತ್ತಿದೆ ಎಂದಿದ್ದಾರೆ.

ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಹೇಳಿಕೆ ನೀಡಿದ್ದು, ನೀರಾವರಿ ಇಲಾಖೆಗೆ ಸಂಬಂಧಿಸಿದ ಭ್ರಷ್ಟಾಚಾರ ವಿಷಯದಲ್ಲಿ ದಾಳಿ ನಡೆದಿರುವುದು ಸಂತೋಷ. ಯಡಿಯೂರಪ್ಪ ಪದಚ್ಯುತರಾಗುವ ಮುನ್ನ, ದೆಹಲಿ ವರಿಷ್ಠರಿಗೂ ಭ್ರಷ್ಟಾಚಾರದ ಬಗ್ಗೆ ತಿಳಿಸಿದ್ದೆ ಎಂದಿದ್ದಾರೆ.

ಹಣಕಾಸು ಇಲಾಖೆ ಸೇರಿದಂತೆ ಸಂಬಂಧಿಸಿದ ಇಲಾಖೆಗಳ ಒಪ್ಪಿಗೆ ಪಡೆಯದೇ 20 ಸಾವಿರ ಕೋಟಿ ರೂ.ಗಳ ಟೆಂಡರ್‌ಗಳಿಗೆ ಅನುಮೋದನೆ ನೀಡಿ ಸುಮಾರು 2 ಸಾವಿರ ಕೋಟಿ ರೂ.ಗಳ ಕಿಕ್‌ಬ್ಯಾಕ್ ಪಡೆಯಲಾಗಿತ್ತು. ಯಡಿಯೂರಪ್ಪ ಪದಚ್ಯುತಿಗೆ ಇದೇ ಪ್ರಮುಖ ಕಾರಣ ಎಂದು ವಿಶ್ವನಾಥ್ ತಿಳಿಸಿದ್ದಾರೆ.

# ಜಿಲ್ಲೆಯಲ್ಲಿ 34.72 ಮಿ.ಮೀ. ಮಳೆ

**42ಲಕ್ಷ ರೂ. ನಷ್ಟ**

ದಾವಣಗೆರೆ, ಅ.7- ಜಿಲ್ಲೆಯಲ್ಲಿ ಬುಧವಾರ 34.72 ಮಿ.ಮೀ. ಮಳೆಯಾಗಿದ್ದು, 42 ಲಕ್ಷ ರೂ. ನಷ್ಟು ಅಂದಾಜು ನಷ್ಟ ಸಂಭವಿಸಿದೆ. ದಾವಣಗೆರೆ ತಾಲ್ಲೂಕಿನಲ್ಲಿ 55 ಎಕರೆ ಮೆಕ್ಕೆಜೋಳ, 2.20 ಎಕರೆ ಕಬ್ಬು ಹಾಗೂ ಮನೆಗಳಿಗೆ ಹಾನಿಯಾಗಿದ್ದು 13.50 ಲಕ್ಷ ರೂ. ನಷ್ಟ ಸಂಭವಿಸಿದೆ. ಹರಿಹರ ತಾಲ್ಲೂಕಿನಲ್ಲಿ ಮನೆಗಳಿಗೆ ಹಾನಿಯಾಗಿದ್ದು 2.20 ಲಕ್ಷ ರೂ. ನಷ್ಟ, ಹೊನ್ನಾಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಮೆಕ್ಕೆಜೋಳ ಹಾಗೂ ಮನೆಗಳ ಹಾನಿಯಿಂದ 5.10 ಲಕ್ಷ ರೂ. ನಷ್ಟ. ನ್ಯಾಮತಿ ತಾಲ್ಲೂಕಿನಲ್ಲಿ ಮನೆಗಳ ಹಾನಿಯಿಂದ 60 ಸಾವಿರ ರೂ. ನಷ್ಟ ಹಾಗೂ ಚನ್ನಗಿರಿ ತಾಲ್ಲೂಕಿನಲ್ಲಿ 50 ಎಕರೆ ಮೆಕ್ಕೆಜೋಳದ ಬೆಳೆ ಹಾಗೂ ಮನೆಗಳಿಗೆ ಹಾನಿಯಾಗಿದ್ದು 20.60 ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ರಾಜ್ಯದ 50 ಕೇಂದ್ರಗಳಲ್ಲಿ ಐಟಿ ದಾಳಿ

**(1ನೇ ಪುಟದಿಂದ)** ಯವರೆಗೂ ಯಡಿಯೂರಪ್ಪ ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಕೇಂದ್ರ ಈ ಶಾಕ್ ನೀಡಿದೆ ಎಂದು ರಾಜಕೀಯ ವಲಯಗಳಲ್ಲಿ ಕೇಳಿ ಬಂದಿದೆ. ಪುತ್ರ ವಿಜಯೇಂದ್ರ ಅವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳಬೇಕೆಂದು ಮುಖ್ಯಮಂತ್ರಿ ಬೊಮ್ಮಾಯಿ ಅವರ ಮೇಲೆ ಯಡಿಯೂರಪ್ಪನವರು ಒತ್ತಡ ಹೇರುತ್ತಲೇ ಇದ್ದಾರೆ.

ಇತ್ತೀಚಿಗೆ ತಮ್ಮ ಆಪ್ತರಿಬ್ಬರನ್ನು ಮುಖ್ಯಮಂತ್ರಿ ಯವರ ರಾಜಕೀಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಸುವಲ್ಲಿ ಯಶಸ್ವಿಯಾಗಿದ್ದ ಯಡಿಯೂರಪ್ಪ, ಪುತ್ರನನ್ನು ಮಂತ್ರಿ ಮಾಡಲು ಕಸರತ್ತು ನಡೆಸಿದ್ದರು.

ವಿಜಯೇಂದ್ರ ಅವರನ್ನು ಸದ್ಯಕ್ಕೆ ಮಂತ್ರಿ ಮಾಡಲು ದೆಹಲಿ ಬಿಜೆಪಿ ವರಿಷ್ಠರಿಗೆ ಆಸಕ್ತಿ ಇಲ್ಲ. ಪಕ್ಷದ ಚಟುವಟಿಕೆಯಲ್ಲೇ ತೊಡಗಿಸಿಕೊಳ್ಳಲಿ ಎಂದು ಮುಖ್ಯಮಂತ್ರಿಯವರು ತಿಳಿ ಹೇಳಿದ್ದರು.

ಇದಾದ ನಂತರ ರಾಜ್ಯದಲ್ಲಿ ನಡೆಯುತ್ತಿರುವ ಉಪಚುನಾವಣೆಯ ಉಸ್ತುವಾರಿಯಲ್ಲೂ ವಿಜಯೇಂದ್ರ ಅವರ ಹೆಸರನ್ನು ಕೈಬಿಡಲಾಗಿತ್ತು. ಆ ನಂತರ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಹಾಗೂ ಬೊಮ್ಮಾಯಿ ಅವರ ಮೇಲೆ ಒತ್ತಡ ಹೇರಿ ಪಟ್ಟಿಗೆ ಹೆಸರನ್ನು ಸೇರಿಸಲಾಯಿತು.

ಈ ಎರಡೂ ಬೆಳವಣಿಗೆಯ ನಂತರ ಯಡಿಯೂರಪ್ಪ ಅವರ ಆಪ್ತರ ಮೇಲೆ ಐ.ಟಿ. ದಾಳಿ ನಡೆಸಿ, ರಾಜಕೀಯವಾಗಿ ಎಚ್ಚರಿಕೆ ಗಂಟೆ ನೀಡಿದೆ.

ಅನಗತ್ಯವಾಗಿ ಒತ್ತಡ ಮತ್ತು ಕಿರುಕುಳ ನೀಡದಂತೆ ಹಾಗೂ ರಾಜಕೀಯವಾಗಿ ದುಡುಕಿನ ನಿರ್ಧಾರಗಳನ್ನು ಕೈಗೊಳ್ಳದಿರುವಂತೆ ಯಡಿಯೂರಪ್ಪನವರ ಮೇಲೆ ಮಾನಸಿಕವಾಗಿ ಒತ್ತಡ ಹೇರಲು ತಂತ್ರಗಾರಿಕೆ ಮಾಡಿದ್ದಾರೆ ಎನ್ನಲಾಗಿದೆ.

ನೀರಾವರಿ ನಿಗಮದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮೂವತ್ತಕ್ಕೂ ಹೆಚ್ಚು ಮಂದಿಯ ಮೇಲೆ ನಡೆದ ಐಟಿ ದಾಳಿ ಬಹುಹೊತ್ತಿನವರೆಗೆ ನಡೆದಿದ್ದು ಈ ಬೆಳವಣಿಗೆ ರಾಜಕೀಯ ವಲಯಗಳಲ್ಲೂ ಸಂಚಲನ ಮೂಡಿಸಿದೆ.

ಬೆಂಗಳೂರು, ಶಿವಮೊಗ್ಗ, ಬಾಗಲಕೋಟೆ ಸೇರಿದಂತೆ ರಾಜ್ಯದ ಹಲ ಭಾಗಗಳಲ್ಲಿ ಐಟಿ ದಾಳಿ ನಡೆದಿದ್ದು, ಬೃಹತ್ ಕಟ್ಟಡಗಳು, ಆಸ್ತಿ ಪಾಸ್ತಿ, ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ.

ಕೇವಲ ಗುತ್ತಿಗೆದಾರರು ಅಷ್ಟೇ ಅಲ್ಲದೆ, ಗುತ್ತಿಗೆದಾರರಿಗೆ ಕಬ್ಬಿಣ, ಸಿಮೆಂಟ್ ಸರಬರಾಜು ಮಾಡುತ್ತಿದ್ದ ಅಂಗಡಿ ಮಾಲೀಕರು ಹಾಗೂ ಲೆಕ್ಕಪರಿಶೋಧಕರ ನಿವಾಸದ ಮೇಲೂ ದಾಳಿ ನಡೆದಿದೆ.

ಈ ಮಧ್ಯೆ ಕೆಲ ಮೂಲಗಳು, ಸದರಿ ದಾಳಿ ನಡೆಸಲು ಆದಾಯ ತೆರಿಗೆ ಇಲಾಖೆ ಕಳೆದ ಆರು ತಿಂಗಳ ಹಿಂದೆಯೇ ಕಾರ್ಯತಂತ್ರ ರೂಪಿಸಿತ್ತು.

ಉಮೇಶ್ ಕಳೆದ 13 ವರ್ಷಗಳಿಂದ ಯಡಿಯೂರಪ್ಪನವರಿಗೆ ಆಪ್ತ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಬೆಂಗಳೂರು ನಗರ ಸಾರಿಗೆಯ ನಿರ್ವಾಹಕ ಹಾಗೂ ಚಾಲಕರಾಗಿ ಸೇವೆಯಲ್ಲಿದ್ದ ಉಮೇಶ್ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಯಡಿಯೂರಪ್ಪನವರ ಆಪ್ತರಾಗಿ ಸೇರಿಕೊಂಡಿದ್ದರು.

# 1.81 ಕೋ.ರೂ. ವಂಚಿಸಿದ ಏಜೆಂಟ್

**(1ನೇ ಪುಟದಿಂದ)** ಮೃತರಾದ ನಾಲ್ವರ ಹೆಸರಿನಲ್ಲಿ 23 ಪಾಲಿಸಿಗಳನ್ನು ವಂಚನಾತ್ಮಕವಾಗಿ ಪಡೆಯಲಾಗಿತ್ತು. ಪ್ರತಿ ಪಾಲಿಸಿಗೆ ಬೆಹೆರಾ ತಾನೇ ನಿಯಮಿತ ಅವಧಿಗೆ ಹಣ ಪಾವತಿಸುತ್ತಿದ್ದ. ನಂತರ ನಕಲಿ ಮರಣ ಪ್ರಮಾಣ ಪತ್ರ ಸೃಷ್ಟಿಸಿ ನಾಮಿನಿಗಳಿಗೆ ಹಣ ಕೊಡಿಸುತ್ತಿದ್ದ. ಶಾಖಾ ವ್ಯವಸ್ಥಾಪಕರೇ ಹಣ ಇತ್ಯರ್ಥ ಪಡಿಸುವ ಸಲುವಾಗಿ ಪ್ರತಿ ಪಾಲಿಸಿಯ ವಿಮೆ ಮೊತ್ತವನ್ನು 10 ಲಕ್ಷ ರೂ.ಗಳಿಗಿಂತ ಕಡಿಮೆ ಇರಿಸಲಾಗುತ್ತಿತ್ತು ಎಂಬುದು ತನಿಖೆಯಿಂದ ತಿಳಿದು ಬಂದಿದೆ.

23 ಪಾಲಿಸಿಗಳಿಂದ ಒಟ್ಟು 1.81 ಕೋಟಿ ರೂ.ಗಳ ಕ್ಲೇಮುಗಳನ್ನು ಸಲ್ಲಿಸಲಾಗಿದೆ. ಐದು ಪಾಲಿಸಿಗಳಿಗೆ ಈಗಾಗಲೇ ಹಣ ಪಾವತಿಯಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

# ದಂಡ ಮುಂದುವರಿಕೆ

**(1ನೇ ಪುಟದಿಂದ)** ಜಾರಿಯಲ್ಲಿತ್ತು. ಅದನ್ನು ಇನ್ನೂ ಆರು ತಿಂಗಳ ಕಾಲ ವಿಸ್ತರಿಸಲಾಗಿದೆ. ಮಾಸ್ಕ್ ಧರಿಸದವರಿಗೆ ರೈಲ್ವೆ ಅಧಿಕಾರಿಗಳು ದಂಡ ವಿಧಿಸಲಿದ್ದಾರೆ.

# 8 ಲಕ್ಷ ರೂ.ಗಳ ಆರ್ಥಿಕ ಮಿತಿ ಪ್ರಶ್ನಿಸಿದ ಸುಪ್ರೀಂ

**(1ನೇ ಪುಟದಿಂದ)** ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಇತರೆ ಹಿಂದುಳಿದ ವರ್ಗಗಳವರಿಗೆ ಶೇ.27 ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರ ಮೀಸಲಾತಿ ನಿಗದಿ ಪಡಿಸಿ ಕೇಂದ್ರ ಸರ್ಕಾರ ಹಾಗೂ ವೈದ್ಯಕೀಯ ಕೌನ್ಸೆಲಿಂಗ್ ಸಮಿತಿ (ಎಂ.ಸಿ.ಸಿ.) ಆದೇಶ ಹೊರಡಿಸಿವೆ. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹಲವಾರು ಅರ್ಜಿಗಳು ದಾಖಲಾಗಿವೆ.

ಪ್ರತಿಯೊಂದು ರಾಜ್ಯದಲ್ಲೂ ಬೇರೆ ಬೇರೆ ಜೀವನ ವೆಚ್ಚವಿದೆ. ಮುಂಬೈ, ಬೆಂಗಳೂರು ಹಾಗೂ ಚೆನ್ನೈ ನಗರಗಳಲ್ಲಿನ ಜೀವನ ವೆಚ್ಚಕ್ಕೂ ಇತರೆ ಸಣ್ಣ ನಗರಗಳಲ್ಲಿನ ಜೀವನ ವೆಚ್ಚಕ್ಕೂ ವ್ಯತ್ಯಾಸ ಇದೆ. ಹೀಗಿರುವಾಗ ಪ್ರತಿಯೊಂದು ಪ್ರದೇಶಕ್ಕೂ 8 ಲಕ್ಷ ರೂ.ಗಳ ಏಕರೂಪದ ಮಿತಿ ನಿಗದಿ ಪಡಿಸಿರುವುದೇಕೆ? ಎಂದು ನ್ಯಾಯಾಲಯ ಪ್ರಶ್ನಿಸಿದೆ.

ಆರ್ಥಿಕ ಹಿಂದುಳಿದಿರುವಿಕೆ ವಾಸ್ತವಿಕ ವಿಷಯ. ಪುಸ್ತಕ ಖರೀದಿಸಲು ಹಾಗೂ ಆಹಾರಕ್ಕೂ ಹಣ ಇಲ್ಲದವರಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಆರ್ಥಿಕವಾಗಿ ಹಿಂದುಳಿದಿರುವವರು ಮುಂದುವರೆದ ವರ್ಗವಾಗಿದ್ದಾರೆ. ಅವರಲ್ಲಿ ಸಾಮಾಜಿಕ ಇಲ್ಲವೇ ಶೈಕ್ಷಣಿಕ ಹಿಂದುಳಿದಿರುವಿಕೆ ಇಲ್ಲ. ಹೀಗಿರುವಾಗ ಕೆನೆಪದರದ 8 ಲಕ್ಷ ರೂ.ಗಳ ಮಿತಿಯನ್ನೇ ಆರ್ಥಿಕವಾಗಿ ಹಿಂದುಳಿದವರಿಗೆ ಹೇಗೆ ಅನ್ವಯಿಸಲು ಸಾಧ್ಯ? ಆರ್ಥಿಕವಾಗಿ ಹಿಂದುಳಿದವರು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

## ಪೆಟ್ರೋಲ್, ಡೀಸೆಲ್ ದರ ಮತ್ತೆ ಹೆಚ್ಚಳ

ನವದೆಹಲಿ, ಅ. 7 – ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಗುರು ವಾರ ಮತ್ತೆ ಹೆಚ್ಚಿಸಲಾಗಿದೆ. ಪೆಟ್ರೋಲ್ ಬೆಲೆ ಲೀಟರ್‌ಗೆ 30 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು 35 ಪೈಸೆ ಹೆಚ್ಚಿಸಲಾಗಿದೆ. ರಾಜ್ಯಗಳ ರಾಜಧಾನಿಗಳ ಪೈಕಿ ಡೆಹರಾಡೂನ್, ಚಂಡೀಘಡ, ಗುವಾಹತಿ, ರಾಂಚಿಗಳಲ್ಲಿ ಮಾತ್ರ ಪೆಟ್ರೋಲ್ ದರ ಲೀಟರ್‌ಗೆ 100 ರೂ.ಗಳಿಗಿಂತ ಕಡಿಮೆ ಇದೆ.

# ನಗರ - ಗ್ರಾಮಾಂತರಗಳಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆರ್.ಎಂ.ಸಿ. ಲಿಂಕ್ ರಸ್ತೆ, ಬಿ.ಟಿ. ಲೇಔಟ್, ಗುಜರಿ ಲೈನ್, ಬಂಬೂ ಬಜಾರ್, ಮಟ್ಟಿಕಲ್, ಬಿಡಿಓ ಕಛೇರಿ, ಇಮಾಮ್ ನಗರ, ಅಮರಪ್ಪನ ತೋಟ, ಆನೆಕೊಂಡ, ಎಲ್.ಬಿ.ಎಸ್. ನಗರ, ಟಿ.ಸಿ. ಲೇಔಟ್, ಬಿಟಿ ಲೇಔಟ್, ಕೆ.ಆರ್. ರಸ್ತೆ, ಐನಳ್ಳಿ ಕಾಂಪೌಂಡ್, ಎಪಿಎಂಸಿ, ಭಾರತ್ ಕಾಲೋನಿ, ಶೇಖರಪ್ಪ ನಗರ ಹೆಚ್.ಕೆ.ಆರ್. ನಗರ, ಕಬ್ಬೂರು ಬಸಾಪುರ ನಗರ, ಅಣ್ಣಾ ನಗರ, ಬಸಾಪುರ ರಸ್ತೆ, ಗೋಶಾಲೆ, ಪಿ.ಬಿ. ರಸ್ತೆ, ರವಿ ಮಿಲ್ ಹಾಗೂ ಆವರಗೆರೆ, ಹೊನ್ನೂರು, ಐಗೂರು, ಮಲ್ಲಶೆಟ್ಟಿಹಳ್ಳಿ, ತೋಳಹುಣಸೆ, ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಹನುಮನಹಳ್ಳಿ, ಕೊಗ್ಗನೂರು, ಹನುಮನಹಳ್ಳಿ, ಆನಗೋಡು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳು ಮತ್ತು ಆರಾಧ್ಯ ಕೈಗಾರಿಕೆ.

ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೊಗಲೇರಿ, ಗೊಪನಾಳು, ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬೊಮ್ಮೇನಹಳ್ಳಿ, ಬಾವಿಹಾಳು, ಬುಳ್ಳಾಪುರ, ಕೊಡಗನೂರು, ನಲ್ಕುಂದ, ಬಸಾಪುರ, ಅಣಬೇರು ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# 'ಉದಕದೊಳಗಿನ ಕಿಚ್ಚು' ಸಿನಿಮಾ ಪೋಸ್ಟರ್ ಬಿಡುಗಡೆ

ದಾವಣಗೆರೆ, ಅ. 7 - 'ಉದಕದೊಳಗಿನ ಕಿಚ್ಚು' ಸಿನಿಮಾ ಪೋಸ್ಟರ್ ಬಿಡುಗಡೆ ಸಮಾರಂಭವು ನಾಳೆ ದಿನಾಂಕ 8ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ ಎಂದು ಚಿತ್ರದ ನಿರ್ದೇಶಕ ಡಿಂಗ್ರಿ ನರೇಶ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾಗರಾಜ್ ಲೋಕಿಕೆರೆ, ಹಿರಿಯ ರಂಗ ಸಂಘಟಕ ಶ್ರೀನಿವಾಸ ಜಿ.ಕಪ್ಪಣ್ಣ, ಸಿನಿಮಾ ನಟ ಮಂಡ್ಯ ರಮೇಶ್ ಇತರರು ಆಗಮಿಸಲಿದ್ದಾರೆ ಎಂದು ಹೇಳಿದರು.

**ನಗರದಲ್ಲಿ ಇಂದು**

1 ಗಂಟೆ 15 ನಿಮಿಷಗಳ ಈ ಸಿನಿಮಾದಲ್ಲಿ ಬಸವಾದಿ ಶಿವಶರಣ ತತ್ವಗಳನ್ನು ಯುವ ಜನತೆಗೆ ತಲುಪಿಸುವ ಉದ್ದೇಶವಿದೆ. ಮಂಡ್ಯ ರಮೇಶ್ ಇತರರು ತಾರಾಗಣದಲ್ಲಿದ್ದಾರೆ. ಬಸವ ಕಲ್ಯಾಣದ ಸುತ್ತ ಮುತ್ತ ಸಿನಿಮಾ ಚಿತ್ರೀಕರಣ ನಡೆಯಲಿದೆ ಎಂದು ಅವರು ತಿಳಿಸಿದರು.

ಸಿನಿಮಾಗೆ ನಾಡಿನ ಎಲ್ಲಾ ಮಠಾಧೀಶರನ್ನು ಭೇಟಿ ಮಾಡಿ ಮಾರ್ಗದರ್ಶನ ಪಡೆದಿರುವುದಾಗಿ ಹೇಳಿದ ಅವರು, ಮಹಾತ್ಮರನ್ನು ಯುವ ಸಮೂಹ ಮರೆತರೆ ಭಾರತದಲ್ಲಿ ಮತ್ತೊಂದು ತಾಲಿಬಾನ್ ಸಂಸ್ಕೃತಿ ಬೆಳೆಯಬಹುದು. ಇದಾಗಬಾರದೆಂಬ ನಿಟ್ಟಿನಲ್ಲಿ ಶರಣರ ತತ್ವಗಳನ್ನು ಜೀವಂತವಾಗಿಡಬೇಕಿದೆ. ಅದಕ್ಕಾಗಿಯೇ ಸಿನಿಮಾ ಮಾಡುತ್ತಿರುವುದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ನಿರ್ಮಾಪಕ ನಂದೀಶ್ ಕುಮಾರ್, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿರುವ ಸೂರಿ ಅಣಬುಕ್ಕಿ, ಪಿ.ರವಿ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಯುವ ಚೇತನ ಆನ್ ಲೈನ್ ಕಾರ್ಯಕ್ರಮ

ರಾಜ್ಯ ಯುವ ಸಂಘಗಳ ಒಕ್ಕೂಟದ ಜಿಲ್ಲಾ ಘಟಕದ ವತಿಯಿಂದ ಇಂದು ಸಂಜೆ 6 ಕ್ಕೆ ಯುವ ಚೇತನ ಶೀರ್ಷಿಕೆಯಡಿ ಜೂಮ್ ಆಪ್ ನಲ್ಲಿ ಆನ್‌ಲೈನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಾ. ಎಸ್. ಬಾಲಾಜಿ ಶುಭ ಸಂದೇಶದೊಂದಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ನಿವೃತ್ತ ಉಪನ್ಯಾಸಕರು ಹಾಗೂ ಚಿಂತಕ ಡಾ. ಎ.ಬಿ. ರಾಮಚಂದ್ರಪ್ಪ ಅವರು ಪ್ರಗತಿಗಾಗಿ ಯುವ ಶಕ್ತಿ ವಿಷಯ ಕುರಿತು ಉಪನ್ಯಾಸ ನೀಡುವರು. ಈ ಕಾರ್ಯಕ್ರಮದಲ್ಲಿ ಯುವಕ ಯುವತಿ ಯರು ಹಾಗೂ ಸಾರ್ವಜನಿಕರು ಸಹ ZOOM MEETING ID : 591 428 6176, PASS-CODE : 12345 ಮೂಲಕ ಭಾಗವಹಿಸಬಹುದು ಎಂದು ಜಿಲ್ಲಾಧ್ಯಕ್ಷ ಎನ್.ಕೆ. ಕೊಟ್ರೇಶ್ , ಉಪಾಧ್ಯಕ್ಷ ಗಂಗಾಧರ್ ಬಿ.ಎಲ್. ನಿಟ್ಟೂರ್ ತಿಳಿಸಿದ್ದಾರೆ.


# ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಅ.7- ಹಳೇಬಾತಿ ಗ್ರಾಮದ ಸರ್ವೇ ನಂ 46 ರ ಜಮೀನಿನ ಪಕ್ಕದ ಚಾನಲ್‌ನಲ್ಲಿ ಇಂದು ಮಧ್ಯಾಹ್ನ 40-45 ವರ್ಷ ವಯಸ್ಸಿನ ಗಂಡಸಿನ ಶವ ಪತ್ತೆಯಾಗಿದೆ.

ಮೃತ ವ್ಯಕ್ತಿಯು ಸಾಧಾರಣ ಮೈಕಟ್ಟು, ದುಂಡು ಮುಖ ಹೊಂದಿದ್ದು, ಮೃತ ವ್ಯಕ್ತಿಯ ಮೈಮೇಲೆ ಯಾವುದೇ ಬಟ್ಟೆಗಳು ಇರುವುದಿಲ್ಲ ಎಂದು ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು ತಿಳಿಸಿದ್ದಾರೆ.

ಮೃತನಿಗೆ ಸಂಬಂಧಿಸಿದ ವ್ಯಕ್ತಿಗಳಿದ್ದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆ ಫೋನ್ ನಂ 08192-262555, ಮೊಬೈಲ್ ನಂ 9480803256 ಅಥವಾ ದಾವಣಗೆರೆ ಪೊಲೀಸ್ ಕಂಟ್ರೋಲ್ ರೂಂ (ಫೋನ್ : 08192-253100) ಗೆ ಸಂಪರ್ಕಿಸಬಹುದು.


# ಮಳೆ : ಗೋಡೆ ಕುಸಿದು ವ್ಯಕ್ತಿ ಸಾವು



ದಾವಣಗೆರೆ, ಅ.7- ಮಳೆಗೆ ನೆಂದಿದ್ದ ಗೋಡೆ ಕುಸಿದು ವ್ಯಕ್ತಿಯೋರ್ವ ಮೃತಪಟ್ಟಿರುವ ಘಟನೆ ತಾಲ್ಲೂಕಿನ ನರಗನಹಳ್ಳಿಯಲ್ಲಿ ನಡೆದಿದೆ.

ಇಂದು ಮಧ್ಯಾಹ್ನ ಊಟ ಮಾಡಿ ಕುಳಿತಿದ್ದ ಮಂಜುನಾಥ್ (53) ಎಂಬಾತನ ಮೇಲೆ ಏಕಾಏಕಿ ಗೋಡೆ ಕುಸಿದು ಬಿದ್ದಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಮಂಜುನಾಥ್ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಅಸುನೀಗಿದ್ದಾರೆ.

## ಬೆಳಗಾವಿ ರವೀಂದ್ರಪ್ಪ ನಿಧನ



ದಾವಣಗೆರೆ ನರಸರಾಜ ರಸ್ತೆ ಅಕ್ಕಮಹಾದೇವಿ ಸ್ಕೂಲ್ ಹತ್ತಿರದ ವಾಸಿ

**ಬೆಳಗಾವಿ ರವೀಂದ್ರಪ್ಪ**

ಅವರು ದಿನಾಂಕ 7.10.2021ರ ಗುರುವಾರ ಸಂಜೆ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 69 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರಿ, ಓರ್ವ ಪುತ್ರ, ಸೊಸೆ, ಅಳಿಯ , ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.10.2021ರ ಶುಕ್ರವಾರ ಬೆಳಿಗ್ಗೆ 11.30ಕ್ಕೆ ಗಾಂಧಿನಗರದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**

**97401 06760, 99169 66123**

## ಬಿ. ಶಂಕರಪ್ಪ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 14ನೇ ಕ್ರಾಸ್ (#3024/30 ಅನುಷ), ಸಂಜೀವಿನಿ ಆಯುರ್ವೇದಿಕ್ ಕಾಲೇಜು ಎದುರಿನ ವಾಸಿ

**ಬಿ. ಶಂಕರಪ್ಪ**

ಅವರು ದಿನಾಂಕ 7.10.2021ರ ಗುರುವಾರ ಸಂಜೆ 7 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಪತ್ನಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.10.2021ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**

**63627 98525, 99016 92648**

## ಟಿ.ಎಂ. ಸಾವಿತ್ರಮ್ಮ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ 2ನೇ ಮೇನ್, 2ನೇ ಕ್ರಾಸ್ ವಾಸಿ, ದಿ|| ಟಿ.ಎಂ. ಶೇಖರಯ್ಯ ಇವರ ಪುತ್ರಿ ಟಿ.ಎಂ. ಸಾವಿತ್ರಮ್ಮ (62) ಅವರು ದಿನಾಂಕ 07.10.2021ರ ಗುರುವಾರ ಮಧ್ಯಾಹ್ನ 3.45 ಕ್ಕೆ ನಿಧನರಾದರು. ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.10.2021ರ ಶುಕ್ರವಾರ ಬೆಳಿಗ್ಗೆ 11.30ಕ್ಕೆ ಬೂದಾಳ್ ರಸ್ತೆಯ ಬಳಿಯ ವೀರಶೈವ ರುದ್ರ ಭೂಮಿಯಲ್ಲಿ ನೆರವೇರಿಸಲಾಗುವುದು.

# ಜಮೀನಿಗೆ ನುಗ್ಗಿದ ಯುಜಿಡಿ ವಾಟರ್ ಪ್ಲಾಂಟ್ ನೀರು



**ಹರಿಹರ ನಗರಸಭೆಯ ಅಧಿಕಾರಿಗಳ ವಿರುದ್ಧ ರೈತರ ಆಕ್ರೋಶ**

ಹರಿಹರ, ಅ.7- ನಗರದ ಯುಜಿಡಿ (ಎಸ್‌ಟಿಪಿ) ವಾಟರ್ ಪ್ಲಾಂಟ್‌ನ ನೀರು ಜಮೀನಿನಲ್ಲಿ ಹರಿದು ಹೋಗುತ್ತಿರುವುದರಿಂದ ಬೆಳೆದ ಫಸಲು ಹಾಳಾಗುತ್ತಿದ್ದು, ನೀರು ಬೇರೆಡೆಗೆ ಹರಿದು ಹೋಗಲು ವ್ಯವಸ್ಥೆ ಮಾಡುವಂತೆ ನಗರಸಭೆಯ ಅಧಿಕಾರಿಗಳ ಬಳಿ ರೈತರು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಹಳೇ ಮೈಸೂರು ಕಿರ್ಲೋಸ್ಕರ್ ಕಂಪನಿಯ ಹಿಂಭಾಗದ ಜಮೀನಿನಲ್ಲಿ ನಗರದಲ್ಲಿನ ಯುಜಿಡಿ ನೀರು ಶೇಖರಣೆ ಮಾಡಿ ಶುದ್ದೀಕರಿಸಿ, ಸಾಗಿಸಲು ಎಸ್‌ಟಿಪಿ ಪ್ಲಾಂಟ್ ನಿರ್ಮಾಣ ಮಾಡಿದ್ದು, ಇಲ್ಲಿಗೆ ಹರಿದು ಬರುವ ನೀರು ಟ್ಯಾಂಕ್ ತುಂಬಿದ ನಂತರದಲ್ಲಿ ಪಕ್ಕದ ಜಮೀನಿನಲ್ಲಿ ಹರಿದು ಹೋಗುವುದರಿಂದ ಭತ್ತದ ಫಸಲಿಗೆ ಹಾನಿಯಾಗಿದೆ. ರೈತರು ನಗರಸಭೆ ಅಧಿಕಾರಿಗಳ ಗಮನಕ್ಕೆ ತಂದರೂ, ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದರಿಂದ ಆಕ್ರೋಶಗೊಂಡ ಸ್ಥಳೀಯ ರೈತರು ಪ್ಲಾಂಟ್ ಸ್ಥಳಕ್ಕೆ ನಗರಸಭೆ ಅಧಿಕಾರಿಗಳನ್ನು ಕರೆಸಿ, ಜಮೀನಿನಲ್ಲಿ ಹರಿದು ಹೋಗುತ್ತಿರುವ ನೀರನ್ನು ತೋರಿಸುವ ಮೂಲಕ ಸೂಕ್ತ ವ್ಯವಸ್ಥೆ ಮಾಡದೇ ಹೋದಲ್ಲಿ ನಿಮ್ಮ ವಾಹನಗಳನ್ನು ಇಲ್ಲಿಂದ ತೆರಳಲು ಬಿಡುವುದಿಲ್ಲ ಎಂದು ಬಿಗಿ ಪಟ್ಟು ಹಿಡಿದರು.

ನಗರಸಭೆ ಎಇಇ ಬಿರಾದಾರ್ ಮಾತನಾಡಿ, ಈಗಾಗಲೇ ಇಲ್ಲಿನ ನೀರು ಹರಿದು ಹೋಗಲು ಸುಮಾರು 400 ಮೀಟರ್ ಉದ್ದನೆಯ ಪೈಪ್ ಅಳವಡಿಸಲು 24 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಸಿದ್ಧತೆ ಮಾಡಲಾಗಿದೆ. ಮಳೆ ನಿಂತು ಬಿಸಿಲು ಬಿದ್ದ ತಕ್ಷಣವೇ ಕಾಮಗಾರಿ ಪ್ರಾರಂಭ ಮಾಡಲಾಗುತ್ತದೆ ಎಂದು ಹೇಳಿದರು.

ರೈತರಾದ ಬೆಣ್ಣೆ ರೇವಣಸಿದ್ದಪ್ಪ, ಬೆಣ್ಣೆ ರಾಜಶೇಖರ್, ಬೆಣ್ಣೆ ಸಿದ್ದಪ್ಪ ಇತರರು ಮಾತನಾಡಿ, ಇಲ್ಲಿಂದ ಹರಿದು ಬರುವ ಕಲ್ಮಶ ನೀರು ಟ್ಯಾಂಕ್ ತುಂಬಿದ ನಂತರ ಸುಮಾರು 35 ಎಕರೆ ಜಮೀನಿನಲ್ಲಿ ಹರಿದು ಭತ್ತದ ಫಸಲಿಗೆ ಹಾನಿಮಾಡುತ್ತಿದೆ. ಮಳೆ ಕಾರಣ ನೀರು ನಮ್ಮಗಳ ಜಮೀನಿಗೆ ಹರಿದು ಹಾನಿಯುಂಟು ಮಾಡಿದೆ. ನಗರಸಭೆಯ ಅಧಿಕಾರಿಗಳಿಗೆ ತಿಳಿಸಿದರೂ ನಿರ್ಲಕ್ಷ್ಯ ವಹಿಸಿದ ಕಾರಣ ಸ್ಥಳಕ್ಕೆ ಕರೆಸಿ ಅವರಿಗೆ ಮನದಟ್ಟು ಮಾಡಲಾಯಿತು. ಮಾತಿಗೆ ಮಾತು ಬೆಳೆದು ಆಕ್ರೋಶ ವ್ಯಕ್ತಪಡಿಸಿದ್ದೇವೆ ಹೊರತು ಉದ್ದೇಶ ಪೂರ್ವಕವಾಗಿ ಅಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಜಿ. ನಂಜಪ್ಪ, ಪೂಜಾರ್ ಈರಣ್ಣ, ಸುರೇಶ್ ಚಂದಾಪೂರ್, ಬೆಣ್ಣೆ ಬಾಬು, ನಿಜಲಿಂಗಪ್ಪ, ನಾಗರಾಜ್, ನಗರಸಭೆ ವಾಟರ್ ಇಂಜಿನಿಯರ್ ಮಂಜುನಾಥ್ ಇನ್ನಿತರರಿದ್ದರು.

## ಹರಿಹರ ದಸರಾ ಉತ್ಸವ ಸಮಿತಿಯಿಂದ ದುರ್ಗಾಮಾತೆಯ ಪ್ರತಿಷ್ಠಾಪನೆ



ಹರಿಹರ, ಅ.7- ನಗರದ ದಸರಾ ಉತ್ಸವ ಸಮಿತಿ ವತಿಯಿಂದ ನಡುವಲ ಪೇಟೆಯ ಶ್ರೀ ನಾಮದೇವ ಕಲ್ಯಾಣ ಮಂಟಪದಲ್ಲಿ ತಾಯಿ ದುರ್ಗಾಮಾತೆಯನ್ನು ಪ್ರತಿಷ್ಠಾಪಿಸಿ ಕುಂಕುಮಾರ್ಚನೆ, ವಿಶೇಷ ಪೂಜೆಯನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಪ್ರಧಾನ ಅರ್ಚಕ ನಾರಾಯಣ ಜೋಯ್ಸ್, ಸಮಿತಿ ಅಧ್ಯಕ್ಷ ಶಂಕರ್ ಖಟಾವ್ಕರ್, ಟಿ.ಜೆ. ಮುರುಗೇಶಪ್ಪ, ಮಹಾದೇವಪ್ಪ ಗೌಡ್ರು ಅಮರಾವತಿ, ಬಸವರಾಜ್ ಪಾಟೀಲ್, ಶಿವಪ್ರಕಾಶ್ ಶಾಸ್ತ್ರಿ, ಕರಿಬಸಪ್ಪ ಕಂಚಿಕೇರಿ, ನಾಗೇಂದ್ರಪ್ಪ ಗಂಗನರಸಿ, ಪ್ರಕಾಶ್ ಶೆಟ್ಟಿ, ಮಾಲತೇಶ ಭಂಡಾರೆ, ಐರಣಿ ನಾಗರಾಜ್, ಹಲಸಬಾಳು ಬಸವರಾಜಪ್ಪ, ರೇವಣಸಿದ್ದಪ್ಪ ಅಮರಾವತಿ, ರಾಘವೇಂದ್ರ, ಕಿರೋಜಿ, ಅಂಬಾಸಾ ಹಂಸಾಗರ್, ನಾಗಮಣಿ ಶಾಸ್ತ್ರಿ ಮತ್ತು ಇತರರು ಹಾಜರಿದ್ದರು.

## ವಿಜಯನಗರ ಪೊಲೀಸ್ ವರಿಷ್ಠಾಧಿಕಾರಿ ಕೆ. ಅರುಣ್ ಹರಪನಹಳ್ಳಿಗೆ ಭೇಟಿ



ಹರಪನಹಳ್ಳಿ, ಅ.7- ನೂತನ ವಿಜಯನಗರ ಜಿಲ್ಲೆಯ ಪ್ರಥಮ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಕವಾದ ಬಳಿಕ ಇದೇ ಮೊದಲ ಬಾರಿಗೆ ಇಂದು ಪಟ್ಟಣಕ್ಕೆ ಎಸ್‌ಪಿ ಕೆ. ಅರುಣ್ ಆಗಮಿಸಿದ್ದು ಹರಪನಹಳ್ಳಿ, ಹಲುವಾಗಲು, ಅರಸೀಕೆರೆ ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿ ಇಲಾಖೆಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿದರು.

ಈ ವೇಳೆ ಡಿವೈಎಸ್ಪಿ ವಿ.ಎಸ್. ಹಾಲಮೂರ್ತಿ ರಾವ್, ಸಿಪಿಐ ನಾಗರಾಜ್ ಎಂ. ಕಮ್ಮಾರ್, ಪಿಎಸ್‌ಐ ಸಿ. ಪ್ರಕಾಶ್, ಪ್ರೊಬೇಷನರಿ ಪಿಎಸ್‌ಐ ನಾರಾಯಣ ಸೇರಿದಂತೆ ಸಿಬ್ಬಂದಿಗಳಾದ ಕೂಲಹಳ್ಳಿ ಕೊಟ್ರೇಶ್, ಅಣ್ಣಿ ಜಾತಪ್ಪ, ಮಲ್ಲೇಶ್ ನಾಯ್ಕ, ಜಗದೀಶ್, ಮಾದಾಪುರ ಬಿ. ನಿಂಗಪ್ಪ, ಜಿ. ಕೊಟ್ರೇಶ್, ವಿಷ್ಣುವರ್ಧನ್, ಅಜ್ಜಪ್ಪ, ಮಾಲತೇಶ, ಮಂಜುಳಾ ಇನ್ನಿತರರಿದ್ದರು.

## ಎಲೆಬೇತೂರಿನಲ್ಲಿ ಕೊರೊನಾ ಲಸಿಕೆ



ದಾವಣಗೆರೆ, ಅ.7 - ಶಾಮನೂರು ಕುಟುಂಬದಿಂದ ಉಚಿತ ಕೊರೊನಾ ಲಸಿಕೆಯನ್ನು ಎಲೆಬೇತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನೀಡಲಾಯಿತು.

ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಗ್ರಾಮೀಣ ಭಾಗದ ಜನರ ಆರೋಗ್ಯದ ಹಿತದೃಷ್ಟಿಯಿಂದ ನಗರಕ್ಕೆ ಸೀಮಿತವಾಗಿದ್ದ ಕೊರೊನಾ ಲಸಿಕೆಯನ್ನು ಗ್ರಾಮೀಣ ಭಾಗಕ್ಕೂ ವಿಸ್ತರಿಸಿದ ಹಿನ್ನೆಲೆಯಲ್ಲಿ ಜನರಿಗೆ ಉಚಿತ ಕೊರೊನಾ ಲಸಿಕೆ ನೀಡಲಾಯಿತು.

ಈ ಸಂದರ್ಭದಲ್ಲಿ ಜಿ. ಪಂ. ಮಾಜಿ ಸದಸ್ಯ ಬಿ. ಕರಿಬಸಪ್ಪ, ಗ್ರಾ. ಪಂ. ಸದಸ್ಯರಾದ ಮರಕುಂಟಿ ಮಂಜುನಾಥ್, ಚೇತನ್ ಕುಮಾರ್, ಹಂಚಿನಮನಿ ಗ್ರಾಮದ ಎಂ.ಷಡಕ್ಷರಪ್ಪ, ಎಂ.ಎನ್. ನರೇಂದ್ರ, ಕಲಪನಹಳ್ಳಿ ನಾಗರಾಜ್ ಹಾಗೂ ಇತರರು ಉಪಸ್ಥಿತರಿದ್ದರು.

## ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ರಾಮೇಶ್ವರ ಗ್ರಾಮದಲ್ಲಿ ಕ್ಷೇತ್ರೋತ್ಸವ



ದಾವಣಗೆರೆ, ಅ.7 - ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ನ್ಯಾಮತಿ ತಾಲ್ಲೂಕು ರಾಮೇಶ್ವರ ಗ್ರಾಮದಲ್ಲಿ ಶೇಂಗಾ ಬೆಳೆಯ ವಿವಿಧ ತಳಿಗಳ ಕ್ಷೇತ್ರ ಪ್ರಯೋಗದ ಕ್ಷೇತ್ರೋತ್ಸವವನ್ನು ಮಲ್ಲಿಕಾರ್ಜುನಪ್ಪ ನೇತೃತ್ವದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಗತಿಪರ ರೈತ ರಾಕೇಶ್ ನೆರವೇರಿಸಿಕೊಟ್ಟರು.

ಜಿಪಿಬಿಡಿ 4 ಜಿ-2, 52 ಕಾಯಿಗಳ ಸಂಖ್ಯೆಯ ಶೇಂಗಾ ತಳಿಗಳ ಹಾಗೂ ಮೇವು ಬಹಳ ಉತ್ತಮವಾಗಿದೆ ಎಂದು ಪ್ರಗತಿಪರ ರೈತ ರವಿ ತಮ್ಮ ಅನಿಸಿಕೆಯನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಮಾತನಾಡಿ, ರೈತರು ಉತ್ತಮವಾದ ತಳಿಗಳನ್ನು ಆಯ್ಕೆ ಮಾಡಿಕೊಂಡು ಬೆಳೆಯನ್ನು ಬೆಳೆಯುವುದು ಬಹಳ ಸೂಕ್ತ ಹಾಗೂ ಬಿತ್ತನೆಯ ಮೊದಲು ಬೀಜೋಪಚಾರ ಮಾಡುವುದರಿಂದ ಬೀಜದಿಂದ ಹರಡುವ ರೋಗಗಳನ್ನು ತಡೆಯಬಹುದು ಎಂದರು. ಪ್ರಗತಿಪರ ರೈತ ರಾಕೇಶ್ ಹಾಗೂ ರೈತ ಮಹಿಳೆ ಯಶೋಧಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮವನ್ನು ಡಾ. ಅವಿನಾಶ್ ಮತ್ತು ಇತರರು ಭಾಗವಹಿಸಿದ್ದರು.

# 22 ಕೆರೆಗಳ ಏತ ನೀರಾವರಿ ಯೋಜನೆಯಲ್ಲಿನ ಕಳಪೆ ಕಾಮಗಾರಿಯಿಂದ ನೀರು ಪೂರೈಕೆ ಅಸಮರ್ಪಕ

**ಅಣಜಿ ಗ್ರಾಮದಲ್ಲಿನ ಗ್ರಾಮ ಸ್ವರಾಜ್ ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ವೀಕ್ಷಕ ಮುದೇಗೌಡ್ರು ಗಿರೀಶ್**



ದಾವಣಗೆರೆ, ಅ.7- ಅಹಿಂಸೆಯ ಮೂಲಕ ಸ್ವಾತಂತ್ರ್ಯವನ್ನು ತಂದು ಕೊಟ್ಟ ಮಹಾತ್ಮ ಗಾಂಧೀಜಿಯವರನ್ನು ಸ್ಮರಿಸಿ, ಅವರ ತತ್ವ, ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಮಹಾತ್ಮರ ಹಾದಿಯಲ್ಲಿ ನಡೆಯಬೇಕು ಎಂದು ಜಿ.ಪಂ. ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ ಕರೆ ನೀಡಿದರು.

ಗಾಂಧಿ ಜಯಂತಿ ಪ್ರಯುಕ್ತ ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ವತಿಯಿಂದ ಅಣಜಿ ಗ್ರಾಮದಲ್ಲಿ ಹೆಮ್ಮನಬೇತೂರು, ಹುಲಿಕಟ್ಟೆ ಹಾಗೂ ಅಣಜಿ ಗ್ರಾಮ ಪಂಚಾಯ್ತಿಗಳ ಜಿಲ್ಲಾ ಮುಖಂಡರು ಮತ್ತು ಸದಸ್ಯರು ಗ್ರಾಮ ಸ್ವರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಮೇಲೆ ದಬ್ಬಾಳಿಕೆ ಮಾಡುವ ಪ್ರತಿ ಭಟನೆಯನ್ನು ಹತ್ತಿಕ್ಕುವ ಕೆಲಸ ಮಾಡುತ್ತಿವೆ. ಈ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಮಾಡಿದ ಜನಪರ ಯೋಜನೆಗಳನ್ನು ಕಡೆಗಣಿಸುತ್ತಿವೆ ಎಂದು ಆರೋಪಿಸಿದರು.

ಜಿಲ್ಲಾ ಕಾಂಗ್ರೆಸ್ ವೀಕ್ಷಕ ಮುದೇಗೌಡ್ರು ಗಿರೀಶ್ ಮಾತನಾಡಿ, 22 ಕೆರೆಗಳ ಏತ ನೀರಾವರಿ ಯೋಜನೆಯು ಕಳಪೆ ಕಾಮಗಾರಿಯಿಂದ ರೈತರಿಗೆ ಸರಿಯಾಗಿ ನೀರು ಪೂರೈಕೆಯಾಗುತ್ತಿಲ್ಲ. ಕೂಡಲೇ ಸರ್ಕಾರ ಈ ಬಗ್ಗೆ ಗಮನ ಹರಿಸಿ ರೈತರ ಹೊಲಗಳಿಗೆ ಸರಿಯಾದ ಕ್ರಮದಲ್ಲಿ ನೀರು ಹರಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬಿ.ಟಿ. ಹನುಮಂತಪ್ಪ ವಹಿಸಿದ್ದರು. ಎಪಿಎಂಸಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ವೀಕ್ಷಕರಾದ ನಾಗೇಂದ್ರಪ್ಪ, ಕಾಂಗ್ರೆಸ್ ಮುಖಂಡ ಕೊಟ್ರೇಶ್ ನಾಯ್ಕ್, ಪರಶು ರಾಮ ಅವರುಗಳು ಮಾತನಾಡಿದರು.

ಸಮಾರಂಭದಲ್ಲಿ ಜಿ.ಪಂ. ಮಾಜಿ ಸದಸ್ಯ ಬೇತೂರು ಕರಿಬಸಪ್ಪ, ತಾ.ಪಂ. ಮಾಜಿ ಸದಸ್ಯ ಶಂಭುಲಿಂಗಪ್ಪ, ಹೆಮ್ಮನಬೇತೂರು ಪ್ರಕಾಶ, ಕಂದನಕೋವಿ ಕೆಂಚವೀರಪ್ಪ, ಅಣಜಿ ಪ್ರಕಾಶ್ ಪಾಟೀಲ್, ಅಣಜಿ ಹೊನ್ನಪ್ಪ, ಬಸವಲಿಂಗಪ್ಪ, ಅಂಜಿನಪ್ಪ, ರಾಜಪ್ಪ, ಅಸಂಘಟಿತ ಕಾರ್ಮಿಕ ಸಂಘದ ಅಧ್ಯಕ್ಷ ಮೆಳ್ಳೇಕಟ್ಟೆ ಹನುಮಂತಪ್ಪ, ಕಿಸಾನ್ ಮೋರ್ಚಾ ಅಧ್ಯಕ್ಷ ಹಾಲೇಶ್ ಮತ್ತು ಇತರರು ಭಾಗವಹಿಸಿದರು.

## ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್ ಕೊಡುಗೆ



**ಮಲೇಬೆನ್ನೂರು**

ಮಲೇಬೆನ್ನೂರು, ಅ. 7 - ಲಕ್ಕಶೆಟ್ಟಿಹಳ್ಳಿ, ಯಲವಟ್ಟಿ ಮತ್ತು ಜಿ.ಟಿ. ಕಟ್ಟೆ ಗ್ರಾಮಗಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್ ಅನಿತಾ ಗುರುರಾಜ್ ಅವರು ಕೊಡುಗೆಯಾಗಿ ನೀಡಿದ ಗಣಕಯಂತ್ರಗಳನ್ನು ಅವರ ಪರವಾಗಿ ಹರಿಹರ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್‌ಕುಮಾರ್ ಹೆಗಡೆ ಮತ್ತು ಅವರ ತಂಡ ವಿತರಿಸಿದರು.

ಜಿ.ಟಿ. ಕಟ್ಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶರಣ್‌ಕುಮಾರ್ ಹೆಗಡೆ ಮಾತನಾಡಿ, ತಾಲ್ಲೂಕಿನ 12 ಶಾಲೆಗಳಿಗೆ ಕಂಪ್ಯೂಟರ್ ಅಗತ್ಯವಿರುವುದನ್ನು ಮನಗಂಡು ಬೆಂಗಳೂರಿನ ದಾನಿಗಳನ್ನು ಮನವೊಲಿಸಿ ಉಪಾಧ್ಯಾಯರು ಮೊಬೈಲ್‌ನಲ್ಲಿ ಆನ್‌ಲೈನ್‌ನಲ್ಲಿ ದಾಖಲಾತಿ ಮಾಡುವುದು ಮತ್ತು ಇಂಟರ್ ನೆಟ್ ಸೆಂಟರ್‌ಗಳಿಗೆ ಅಲೆದಾಟ ಕಂಡು ಶಾಲೆ ಮತ್ತು ಮಕ್ಕಳ ಹಿತವನ್ನು ಗಮನದಲ್ಲಿಟ್ಟು ಸ್ವಯಂ ಸೇವಾ ಸಂಸ್ಥೆಗಳನ್ನು ಪತ್ತೆ ಹಚ್ಚಿ ಈ ಕಾರ್ಯ ಮಾಡುತ್ತಿದ್ದು ತೃಪ್ತಿ ತಂದಿದೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಕೆಂಚಪ್ಪ, ಸಂತೋಷ್, ಕಾಳಪ್ಪ, ಮುಖ್ಯ ಶಿಕ್ಷಕರಾದ ಬೀರಪ್ಪ, ಸತೀಶ್, ಬಸವರಾಜಪ್ಪ, ಗ್ರಾ.ಪಂ ಸದಸ್ಯರಾದ ನಾಗರಾಜ್, ಕರಿಬಸಮ್ಮ, ಬೀರಪ್ಪ, ಭೂದಾನಿ ಹನುಮಂತಪ್ಪ, ಶಿಕ್ಷಕರ ಸಂಘದ ಚನ್ನಬಸಪ್ಪ, ವಿನೋದಮ್ಮ, ಹನುಮರಡ್ಡೇರ, ಲೀಲಾವತಿ, ನಿವೃತ್ತ ಶಿಕ್ಷಕ ಎಂ. ಹನುಮಂತಪ್ಪ, ಶಾಂತಕುಮಾರ್ ಮತ್ತಿತರರು ಹಾಜರಿದ್ದರು.

## ಮನೆಗಳಿಗೆ ನುಗ್ಗಿದ ಕಲುಷಿತ ನೀರು: ಅಸಮಾಧಾನ

**ಅಸಮರ್ಪಕ ಚರಂಡಿ ವ್ಯವಸ್ಥೆ**

ದಾವಣಗೆರೆ, ಅ.7- ಧಾರಾಕಾರ ಮಳೆಯಿಂದಾಗಿ ತತ್ತರಿಸಿರುವ ಇಲ್ಲಿನ ಎಸ್ಸೆಸ್ಸೆಂ ನಗರ 'ಸಿ' ಬ್ಲಾಕ್, ಬೀಡಿ ಕಾರ್ಮಿಕರ ಕಾಲೋನಿ, ಎಚ್‌ಕೆಬಿಎನ್ ಲೇಔಟ್‌ಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಒತ್ತಾಯಿಸಿ ಸ್ಥಳೀಯ ನಿವಾಸಿಗಳು ನಗರದ ನಗರ ಪಾಲಿಕೆ ಮುಂಭಾಗದಲ್ಲಿ ಇಂದು ಪ್ರತಿಭಟಿಸಿದರು.

ತಮ್ಮ ಭಾಗಕ್ಕೆ ಮೂಲ ಸೌಕರ್ಯ ಕಲ್ಪಿಸಲು ಒತ್ತಾಯಿಸಿ ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಅವರಿಗೆ ಮನವಿ ಸಲ್ಲಿಸಿದರು.

ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ನಮ್ಮಗಳ ಮನೆಗಳಿಗೆ ಕಲುಷಿತ ನೀರು ನುಗ್ಗಿ, ಜೀವನವೇ ಅಸ್ತವ್ಯಸ್ತವಾಗಿದೆ. ಈ ಭಾಗದಲ್ಲಿ ಚರಂಡಿಗಳು ಇಲ್ಲದಿರುವುದು, ಅವೈಜ್ಞಾನಿಕವಾಗಿ ನಿರ್ಮಿಸಿರುವ ಒಳ ಚರಂಡಿಗಳಿಂದಾಗಿ ಸಮಸ್ಯೆ ಮತ್ತಷ್ಟು ಜಟಿಲವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈಗಾಗಲೇ ಮಳೆಯಿಂದಾಗಿ ಇಡೀ ರಾತ್ರಿ ಮಕ್ಕಳಿಂದ ವಯೋವೃದ್ಧರವರೆಗೆ ಪ್ರಾಣ ಕೈಯಲ್ಲಿಡಿದು ದಿನ ಕಳೆಯುತ್ತಿದ್ದೇವೆ. ಜೋರು ಮಳೆ ಬಂದರೆ ಇಡೀ ಮನೆ ಮಂದಿ ಸೇರಿಕೊಂಡು ಮನೆಗೆ ನುಗ್ಗಿದ ನೀರನ್ನು ಹೊರ ಹಾಕುತ್ತಿದ್ದರೆ ಮತ್ತಷ್ಟು ನೀರು ಒಳಗೆ ನುಗ್ಗುತ್ತಿದೆ. ಆಹಾರ ಧಾನ್ಯ, ಬಟ್ಟೆ ಬರೆ, ದಾಖಲಾತಿ, ಶಾಲಾ-ಕಾಲೇಜು ಪುಸ್ತಕಗಳು ಹೀಗೆ ಎಲ್ಲವೂ ಮಳೆ ನೀರಿನಲ್ಲಿ ತೊಯ್ದು ಹಾಳಾಗುತ್ತಿವೆ ಎಂದು ಅಳಲಿಟ್ಟರು.

ಚರಂಡಿಗಳು ಇಲ್ಲದ ಕಾರಣಕ್ಕೆ ಮಳೆಯ ನೀರು ಮನೆಗಳೊಳಗೆ ನುಗ್ಗಿ, ತೀವ್ರ ತೊಂದರೆಯಾಗುತ್ತಿದೆ. ಅನೇಕ ಮನೆಗಳ ಗೋಡೆಗಳು ತೇವಗೊಂಡು, ಶಿಥಿಲವಾಗಿವೆ. ಯಾವುದೇ ಕ್ಷಣದಲ್ಲಿ ಮನೆಯಲ್ಲಿದ್ದವರ ಮೇಲೆ ಕುಸಿದು ಬೀಳುವ ಆತಂಕದಲ್ಲೇ ಮನೆ ಮಂದಿಯೆಲ್ಲಾ ಜೀವ ಕೈಯ್ಯಲ್ಲಿ ಹಿಡಿದು ಹಗಲು-ರಾತ್ರಿ ಕಳೆಯಬೇಕಾದ ಸ್ಥಿತಿ ಇದೆ ಎಂದರು.

ಪ್ರತಿಭಟನೆಯಲ್ಲಿ ನಿವಾಸಿಗಳಾದ ಇತ್ರಾಜ್, ಐಸಾಕ್, ಬಾಬಾಜಾನ್, ಎಚ್. ಡಿ.ಗೌಸ್‌ಪೀರ್, ಸೈಯದ್ ಜಿಯಾ, ಮಹಮ್ಮದ್ ಹಬೀಬುಲ್ಲಾ, ದಾವಲ್ ಸಾಬ್, ಸಿದ್ದಿಕ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ತಾಲ್ಲೂಕಿನ ವಿವಿಧೆಡೆ ಮಳೆ: ಅಪಾರ ಪ್ರಮಾಣದ ಬೆಳೆ ನಷ್ಟ



ಹರಪನಹಳ್ಳಿ, ಅ.7- ನಿನ್ನೆ ಸುರಿದ ಮಳೆಯಿಂದ ತಾಲ್ಲೂಕಿನಲ್ಲಿ ಫಸಲಿಗೆ ಬಂದ ಮೆಕ್ಕೆಜೋಳ, ಜೋಳ, ರಾಗಿ, ಕಬ್ಬು, ತರಕಾರಿ ಬೆಳೆಗಳು ಸಂಪೂರ್ಣ ನೆಲಕಚ್ಚಿದ್ದು ಅಪಾರ ಪ್ರಮಾಣದ ಬೆಳೆ ನಷ್ಟವಾಗಿದೆ.

ಸತ್ತೂರು, ಹಳ್ಳಿಕೇರಿ ಕೆರೆಗಳು ತುಂಬಿ ಹರಿಯುತ್ತಿದ್ದು, ಹಳ್ಳಿಕೇರಿಯಲ್ಲಿ ಅನೇಕ ಮನೆಗಳು ಬಿದ್ದಿವೆ. ಪಟ್ಟಣದಲ್ಲಿ 7.0 ಮಿ.ಮೀ., ಅರಸೀಕೆರೆ 10.01ಮಿ.ಮೀ., ಚಿಗಟೇರಿ 14.02 ಮಿ.ಮೀ., ಹಿರೇಮೇಗಳಗೆರೆ 43.02 ಮಿ.ಮೀ, ಉಚ್ಚಂಗಿದುರ್ಗ 40.04 ಮಿ.ಮೀ., ತೆಲಿಗಿ 27.04 ಮಿ.ಮೀ., ಹಲುವಾಗಲು 48.05 ಮಿ.ಮೀ. ನಷ್ಟು ಮಳೆಯಾಗಿದೆ. ಬೆಳೆ ಹಾನಿ ಹಾಗೂ ಮನೆಗಳು ಜಖಂ ಆಗಿದ್ದು, ಪರಿಶೀಲನೆ ನಡೆಸಲಾಗುತ್ತಿದೆ ಎಂದು ತಹಶೀಲ್ದಾರ್ ಎಲ್.ಎಂ. ನಂದೀಶ್ ತಿಳಿಸಿದ್ದಾರೆ.

## ಸತತ ಮಳೆ : 7 ಮನೆಗಳಿಗೆ ಹಾನಿ



ಮಲೇಬೆನ್ನೂರು, ಅ.7- ಬುಧವಾರ ದಿನವಿಡೀ ಸುರಿದ ಮಳೆಯಿಂದಾಗಿ ಮಲೇಬೆನ್ನೂರು ಹೋಬಳಿಯ ಗುಳದಹಳ್ಳಿ, ಮಲ್ಲನಾಯ್ಕನಹಳ್ಳಿ, ಬೂದಿಹಾಳ್, ನಂದಿತಾವರೆ, ನಂದಿಗಾವಿ, ಹಿಂಡಸಘಟ್ಟ, ಜಿ.ಬೇವಿನಹಳ್ಳಿ ಗ್ರಾಮಗಳಲ್ಲಿ ಒಟ್ಟು 7 ವಾಸದ ಮನೆಗಳ ಗೋಡೆ ಕುಸಿದು ಬಿದ್ದಿದ್ದು, ಭಾಗಶಃ ಹಾನಿಯಾಗಿವೆ.

ಘಟನೆ ವೇಳೆ ಯಾವುದೇ ಪ್ರಾಣ ಹಾನಿಯಾಗಿಲ್ಲ ಎಂದು ಉಪತಹಶೀಲ್ದಾರ್ ಆರ್. ರವಿ ತಿಳಿಸಿದ್ದಾರೆ.

## ವಾಲ್ಮೀಕಿ ಜಯಂತಿ : ಹರಿಹರದಲ್ಲಿ ಸಭೆ

ಅಕ್ಟೋಬರ್ 20 ರಂದು ಜರುಗುವ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಕಾರ್ಯಕ್ರಮದ ಸಿದ್ಧತೆ ಕುರಿತು ಚರ್ಚಿಸಲು ತಹಶೀಲ್ದಾರ್ ಕಾರ್ಯಾಲಯದಲ್ಲಿ ಇಂದು ಸಂಜೆ 4 ಗಂಟೆಗೆ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

## ಲಖೀಂಪುರ : ಸುಪ್ರೀಂ ಕೋರ್ಟ್‌ನಿಂದ ಸ್ವಯಂ ಪ್ರೇರಿತ ವಿಚಾರಣೆ

**ಎಫ್.ಐ.ಆರ್. ಕುರಿತು ಆಕ್ಷೇಪ, ವರದಿ ಸಲ್ಲಿಸಲು ಸೂಚನೆ**

ನವದೆಹಲಿ, ಅ. 7 – ಉತ್ತರ ಪ್ರದೇಶದ ಲಖೀಂ ಪುರ ಖೇರಿಯಲ್ಲಿ ಅಕ್ಟೋಬರ್ 3ರಂದು ನಡೆದ ಘಟನೆ ಯಲ್ಲಿ ಎಂಟು ಜನ ಸಾವನ್ನಪ್ಪಿರುವುದು ದುರಾದೃಷ್ಟಕರ ಎಂದಿರುವ ಸುಪ್ರೀಂ ಕೋರ್ಟ್, ಈ ಬಗ್ಗೆ ವರದಿ ಸಲ್ಲಿಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ತಿಳಿಸಿದೆ.

ಪ್ರರಣಕ್ಕೆ ಸಂಬಂಧಿಸಿದಂತೆ ಎಫ್.ಐ.ಆರ್.ನಲ್ಲಿ ಹೆಸರಿಸಲಾಗಿರುವ ಆರೋಪಿಗಳನ್ನು ಬಂಧಿಸಲಾಗಿದೆಯೇ? ತನಿಖೆಗಾಗಿ ರಚಿಸಲಾಗಿರುವ ವಿಶೇಷ ತನಿಖಾ ತಂಡ ಹಾಗೂ ನ್ಯಾಯಿಕ ಆಯೋಗಗಳ ಕುರಿತು ಸುಪ್ರೀಂ ಕೋರ್ಟ್ ವಿವರ ಕೇಳಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠ ಸ್ವಯಂ ಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಂಡಿದೆ.

ಕೆಲವು ರೈತರು ಹಾಗೂ ಓರ್ವ ಪತ್ರಕರ್ತ ಸೇರಿದಂತೆ ಎಂಟು ಜನರು ಸಾವನ್ನಪ್ಪಿದ್ದಾರೆ. ಇತರೆ ವ್ಯಕ್ತಿಗಳನ್ನೂ ಹತ್ಯೆಗೈಯ್ಯಲಾಗಿದೆ. ಈ ಎಲ್ಲ ದುರಾದೃಷ್ಟಕರ ಘಟನೆಗಳಲ್ಲಿ ಕೆಲವರ ಹತ್ಯೆಗಳೂ ನಡೆದಿವೆ ಎಂದು ನ್ಯಾಯಾಲಯ ಹೇಳಿದೆ. ವಿವರ ಕೇಳಿರುವ ಪೀಠದಲ್ಲಿ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ಹಿಮಾ ಕೊಹ್ಲಿ ಅವರಿದ್ದಾರೆ.

ಘಟನೆಯನ್ನು ನೀವು ಸೂಕ್ತವಾಗಿ ನೋಡುತ್ತಿಲ್ಲ ಹಾಗೂ ಎಫ್.ಐ.ಆರ್. ಸೂಕ್ತವಾಗಿ ದಾಖಲಿಸಿಲ್ಲ ಎಂದು ಉತ್ತರ ಪ್ರದೇಶ ಸರ್ಕಾರವನ್ನು ಪೀಠ ತರಾಟೆಗೆ ತೆಗೆದುಕೊಂಡಿದೆ. ರಾಜ್ಯ ಸರ್ಕಾರದ ಪರವಾಗಿ ಹಾಜರಿದ್ದ ವಕೀಲ ಗರಿಮಾ ಪ್ರಸಾದ್, ಘಟನೆ ದುರಾದೃಷ್ಟಕರ. ತನಿಖೆಗಾಗಿ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ಹಾಗೂ ನ್ಯಾಯಿಕ ಆಯೋಗ ರಚಿಸಿದೆ. ಈ ಕುರಿತ ವಿವರಗಳನ್ನು ಸಲ್ಲಿಸುವುದಾಗಿ ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಒಳಗೊಂಡ ಉನ್ನತ ಹಂತದ ತನಿಖೆ ನಡೆಸಬೇಕು ಎಂದು ಇಬ್ಬರು ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ನಂತರ ನ್ಯಾಯಾಲಯ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡಿದೆ.

## ರೈಲ್ವೆ ನಿಲ್ದಾಣಕ್ಕೆ ರಾಜನಹಳ್ಳಿ ಹನುಮಂತಪ್ಪ ಹೆಸರಿಡಲು ಒತ್ತಾಯ



**ಸಮಾನ ಮನಸ್ಕರ ಕನ್ನಡಪರ ಹೋರಾಟಗಾರರ ಪ್ರತಿಭಟನೆ**

ದಾವಣಗೆರೆ, ಅ.7- ಇಲ್ಲಿನ ರೈಲ್ವೆ ನಿಲ್ದಾಣಕ್ಕೆ ರಾಜನಹಳ್ಳಿ ಹನುಮಂತಪ್ಪ ಅವರ ಹೆಸರಿಡುವಂತೆ ಆಗ್ರಹಿಸಿ, ನಗರದಲ್ಲಿಂದು ರೈಲ್ವೆ ನಿಲ್ದಾಣದ ಮುಂಭಾಗ ನಾಗೇಂದ್ರ ಬಂಡೀಕರ್ ನೇತೃತ್ವದಲ್ಲಿ ಸಮಾನ ಮನಸ್ಕರ ಕನ್ನಡಪರ ಹೋರಾಟಗಾರರು ಪ್ರತಿಭಟನೆ ನಡೆಸಿದರು.

ನಗರವು ಚಿಕ್ಕ ಪಟ್ಟಣವಾಗಿದ್ದ ಸಂದರ್ಭದಲ್ಲಿ ಕೈಗಾರಿಕಾ ನಗರವನ್ನಾಗಿಸಿ ಸರ್ವಾಂಗೀಣ ಅಭಿವೃದ್ಧಿಗೆ ರಾಜನಹಳ್ಳಿ ಕುಟುಂಬ ಅವಿರತ ಶ್ರಮ ಪಟ್ಟಿದೆ. ರಾಜನಹಳ್ಳಿ ಹನುಮಂತಪ್ಪನವರ ಕೊಡುಗೆ ಬಹು ದೊಡ್ಡದಾಗಿದ್ದು, ಆಸ್ಪತ್ರೆ, ಧರ್ಮಶಾಲೆಗಳಿಗೆ ಕೊಡುಗೈ ಅಪಾರವಾಗಿದೆ. ಈ ಹಿನ್ನೆಲೆಯಲ್ಲಿ ನಗರದ ನವೀಕೃತ ರೈಲ್ವೆ ನಿಲ್ದಾಣಕ್ಕೆ ಧರ್ಮ ಪ್ರವರ್ತಕ ರಾಜನಹಳ್ಳಿ ಹನುಮಂತಪ್ಪ ಅವರ ಹೆಸರನ್ನು ನಾಮಕರಣ ಮಾಡಬೇಕೆಂದು ಪ್ರತಿಭಟನಾಕಾರರು ಉಪವಿಭಾಗಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಜೈ ಕರ್ನಾಟಕ ವೇದಿಕೆಯ ಟಿ. ಮಂಜುನಾಥ್ ಗೌಡ, ಎಲ್. ದೊರೆಸ್ವಾಮಿ, ಟಿ. ಅಜ್ಜೇಶ್, ಸಚಿನ್, ಭಾಷಾ, ರಾಜೇಂದ್ರ ಬಂಗೇರ, ಫಕ್ರುದ್ದೀನ್, ಮೋಹನ್ ಕುಮಾರ್, ಟಿ. ಮಮತಾ, ಆನಂದ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಸತತ ಮಳೆಗೆ ಹೊನ್ನಾಳಿ ತಾಲ್ಲೂಕಿನಲ್ಲಿ 5 ಮನೆಗಳಿಗೆ ಹಾನಿ



ಹೊನ್ನಾಳಿ, ಅ.7- ವಾರದಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಈವರೆಗೂ ತಾಲ್ಲೂಕಿನ ವಿವಿಧ ಗ್ರಾಮಗಳ ಐದು ಮನೆಗಳಿಗೆ ಹಾನಿಯಾಗಿದ್ದು, ಒಟ್ಟು 4.30 ಲಕ್ಷ ರೂ. ಹಾನಿ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ಕುಂಬಳೂರು ಗ್ರಾಮದಲ್ಲಿ ಒಂದು ಮನೆ ಹಾನಿಗೀಡಾಗಿದ್ದು, ಸುಮಾರು 40 ಸಾವಿರ ರೂ. ಗೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಹೊಸಹಳ್ಳಿ ಗ್ರಾಮದ ರಜಿಯಾಬಿ ಅಬ್ದುಲ್ ಜಲೀಲ್ ಎಂಬುವವರ ಮನೆ ಹಾನಿಗೊಂಡಿದ್ದು, ಸುಮಾರು 2.50 ಲಕ್ಷ ರೂ. ಗಳಿಗೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ಚೀಲಾಪುರ ಗ್ರಾಮದ ಫಾತಿಮಾಬಿ ಎಂಬುವವರ ಮನೆ ಹಾನಿಗೀಡಾಗಿದ್ದು, ಅಂದಾಜು 50 ಸಾವಿರ ರೂ.ಗಳಿಗೂ ಅಧಿಕ ನಷ್ಟ ಸಂಭವಿಸಿದೆ. ಮಾವಿನಕೋಟೆ ಗ್ರಾಮದ ನಾಗೀಬಾಯಿ ರೇವಾನಾಯ್ಕ ಎಂಬುವವರ ಮನೆ ಹಾನಿಗೊಂಡಿದ್ದು, ಸುಮಾರು 50 ಸಾವಿರ ರೂ.ಗಳಿಗೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ಹೊಸಹಳ್ಳಿ ಗ್ರಾಮದ ಗೌರಮ್ಮ ತಿಪ್ಪೇಶಪ್ಪ ಎಂಬುವವರ ಮನೆ ಭಾಗಶಃ ಹಾನಿಯಾಗಿದ್ದು, ಸುಮಾರು 40 ಸಾವಿರ ರೂ.ಗಳಿಗೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಕಂದಾಯ ಇಲಾಖೆಯ ಅಧಿಕಾರಿಗಳು ಇಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಅಕ್ಟೋಬರ್ ತಿಂಗಳ ಮೊದಲ ವಾರದಲ್ಲಿ ಭಾರೀ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಕೊಯ್ಲಿಗೆ ಬಂದಿರುವ ಮೆಕ್ಕೆಜೋಳ ನೆಲಕಚ್ಚುತ್ತಿದೆ. ಹತ್ತಿ, ಶೇಂಗಾ, ತೊಗರಿ, ಹೆಸರು ಮತ್ತಿತರೆ ಬೆಳೆಗಳೂ ಹಾನಿಗೀಡಾಗುತ್ತಿವೆ. ರೈತರು ದಿಕ್ಕುತೋಚದಂತಾಗಿದ್ದಾರೆ. ಮಳೆ ನೀರು ಹೊಲದಲ್ಲಿ ನಿಂತಿರುವ ಕಾರಣ ವಿವಿಧ ಹೂವು ಬೆಳೆಗಾರರು ಹೂವು ಕೊಯ್ಲು ಮಾಡಲಾಗದೇ ಹೂವನ್ನು ಹೊಲದಲ್ಲೇ ಬಿಟ್ಟಿದ್ದಾರೆ.

## ಖಾಸಗಿ ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಅಭಿಯಾನ



ದಾವಣಗೆರೆ, ಅ.7- ಸೇವೆ ಮತ್ತು ಸಮರ್ಪಣೆ ಕಾರ್ಯಕ್ರಮದ ಅಂಗವಾಗಿ ಮಹಾತ್ಮ ಗಾಂಧೀಜಿಯವರ ಆಶಯದಂತೆ ನಗರದ ಪಿ.ಜೆ. ಬಡಾವಣೆಯ ಖಾಸಗಿ ಬಸ್ ನಿಲ್ದಾಣದಲ್ಲಿ ಬಿಜೆಪಿ ಯುವ ಮೋರ್ಚಾ ದಾವಣಗೆರೆ ಉತ್ತರ ಮಂಡಲದ ತಂಡದಿಂದ ಅಧ್ಯಕ್ಷ ಸಚಿನ್ ವೆರ್ಣೇಕರ್ ನೇತೃತ್ವದಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಈ ಸಂದರ್ಭದಲ್ಲಿ ಮೇಯರ್ ಎಸ್.ಟಿ. ವೀರೇಶ್, ಮಾಜಿ ಮೇಯರ್ ಅಜಯ್ ಕುಮಾರ್, ಉತ್ತರ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಸವರಾಜ್, ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಆರ್.ಎಲ್. ಶಿವ ಪ್ರಕಾಶ್, ಉತ್ತರ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್, ಪದಾಧಿಕಾರಿಗಳಾದ ರಾಜು, ಸಚಿನ್, ಗಿರೀಶ್, ಹರೀಶ್, ವಿವೇಕ್, ಅನಿಲ್, ಪವನ್ ಗೌಡ, ಕಿಶೋರ್, ತಿಲಕ್, ಗಣೇಶ್, ಚನ್ನೇಶ್, ದರ್ಶನ್, ರಘು ತೊಗಟೆ, ನಿಖಿಲ್ ಸೇರಿದಂತೆ ಇತರರು ಇದ್ದರು.

# ಆಯುರ್ವೇದ ದೇಹದ ಜೀವಕೋಶಗಳನ್ನು ಬಲಪಡಿಸುತ್ತದೆ



ಮಲೇಬೆನ್ನೂರು

ಮಲೇಬೆನ್ನೂರು, ಅ. 7- ಆಯುರ್ವೇದ ಔಷಧಿಗಳು ನಮ್ಮ ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ, ದೇಹದ ಒಳಗಿನಿಂದ ಜೀವಕೋಶಗಳನ್ನು ಬಲಪಡಿಸುತ್ತವೆ ಎಂದು ಚಿತ್ರದುರ್ಗದ ಸಿಟಿಇ ಸಹನಿರ್ದೇಶಕ ಹೆಚ್. ಮಂಜುನಾಥ ಅಭಿಪ್ರಾಯಪಟ್ಟರು.

ಅವರು ಧೂಳೆಹೊಳೆ ಗ್ರಾಮದ ಜಿ.ಎಂ.ಸಿ.ಜಿ. ಪ್ರೌಢಶಾಲೆಯಲ್ಲಿ ಸ್ವಾಮಿ ವಿವೇಕಾನಂದ ಯುವ ಬ್ರಿಗೇಡ್ ಪ್ರಾಯೋಜಿತ ಕೊರೊನಾ ನಿಯಂತ್ರಣದ ಸಂಜೀವಿನಿ ಆಯುರ್ವೇದ ಚೂರ್ಣವನ್ನು ಮಕ್ಕಳಿಗೆ ವಿತರಿಸಿ ಮಾತನಾಡಿದರು.


ಆಧುನಿಕ ಔಷಧಗಳು ರೋಗ ಲಕ್ಷಣಗಳ ಮೇಲೆ ಗಮನ ಕೇಂದ್ರೀಕರಿಸಿ ಅವುಗಳ ನಿರ್ಮೂಲನೆಗೆ ಪ್ರಯತ್ನಿಸಿ ದರೆ, ಆಯುರ್ವೇದಯಾವುದೇಅಡ್ಡಪರಿಣಾಮಗಳಿಲ್ಲದೇ ಶೀಘ್ರವಾಗಿ ಚೇತರಿಸಿಕೊಳ್ಳಲು ಅವಕಾಶ ನೀಡುತ್ತದೆ.

ನೈಸರ್ಗಿಕವಾಗಿ ಲಭ್ಯವಿರುವ ಗಿಡಮೂಲಿಕೆಗಳನ್ನು ಬಳಸಿ ತಯಾರಿಸಿರುವ ಸಂಜೀವಿನಿ ಆಯುರ್ವೇದ ಚೂರ್ಣ, ಶಾಲಾ ಮಕ್ಕಳಿಗೆ ಕೊರೊನಾ ರೋಗ ಬರದಂತೆ ತಡೆಯಲು ಸಹಕಾರಿಯಾಗಿದೆ. ಇದನ್ನು ಸೇವಿಸಿ ಮಕ್ಕಳು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಹರಿಹರ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ ಅವರು .ಸಂಜೀವಿನಿ ಆಯುರ್ವೇದ ಚೂರ್ಣವನ್ನು ಬಳಸುವ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿದರು. ತಾಲ್ಲೂಕಿನ ಅನೇಕ ಶಾಲೆಗಳ ಮಕ್ಕಳಿಗೆ ಸಂಜೀವಿನಿ ಆಯುರ್ವೇದ ಚೂರ್ಣವನ್ನು ನೀಡಲು ಸಹಕರಿಸಿದ ಸ್ವಾಮಿ ವಿವೇಕಾನಂದ ಯುವ ಬ್ರಿಗೇಡ್‌ನ ಸಂಸ್ಥಾಪಕರಾದ ಖ್ಯಾತ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಮತ್ತು ಅರವಿಂದ್ ರವರಿಗೆ ಇಲಾಖೆಯ ಪರವಾಗಿ ಅಭಿನಂದನೆ ಸಲ್ಲಿಸಿದರು. ಮುಂದಿನ ದಿನಗಳಲ್ಲಿ ತಾಲ್ಲೂಕಿನ ಉಳಿದ ಶಾಲೆಗಳ ಮಕ್ಕಳಿಗೂ ನೀಡುವಂತೆ ಇಲಾಖೆಯ ಪರವಾಗಿ ವಿನಂತಿಸಿದರು.

ಕಾರ್ಯಕ್ರಮದಲ್ಲಿ ಚಿತ್ರದುರ್ಗ ಸಿಟಿಇ ಪ್ರವಾಚಕರಾದ ಜಿ.ಆರ್.ತಿಪ್ಪೇಶಪ್ಪ, ಹರಿಹರ ಬಿಇಒ ಬಿ.ಸಿ. ಸಿದ್ದಪ್ಪ, ತಾಲ್ಲೂಕು ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಸಿ.ಜಯಣ್ಣ, ಮುಖ್ಯ ಶಿಕ್ಷಕ ಕೆ.ಎಂ. ಗುರುಬಸಯ್ಯ, ಸಿಆರ್ ಪಿ ಮಂಜುನಾಥ, ಸತೀಶ್ ಕುಮಾರ್, ಶಿಕ್ಷಕರಾದ ಜಿ. ನೀಲನಗೌಡ, ಡಿ.ಎಂ. ಮಂಜುನಾಥಯ್ಯ, ಆರ್. ಶಂಕರ್ ನಾಯ್ಕ್, ಕೆ. ಸಂತೋಷ್ ಕುಮಾರ್, ಜಿ. ಮಲ್ಲಪ್ಪ, ಡಿ.ಹೆಚ್. ವೀರಭದ್ರಯ್ಯ ಹಾಜರಿದ್ದರು.

## ಎಐಡಿಎಸ್‌ಓ, ಎಐಡಿವೈಓ, ಎಐಎಂಎಸ್ಎಸ್ ಸಂಘಟನೆಗಳಿಂದ ಭಗತ್‌ಸಿಂಗ್ ಜನ್ಮದಿನ



ದಾವಣಗೆರೆ, ಅ.7- ಎಐಡಿಎಸ್‌ಓ, ಎಐಡಿವೈಓ, ಎಐಎಂಎಸ್‌ಎಸ್ ಸಂಘಟನೆಗಳು ಜಂಟಿಯಾಗಿ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ 114ನೇ ಜನ್ಮ ದಿನವನ್ನು ನಗರದ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿರುವ ಭಗತ್ ಸಿಂಗ್ ಪುತ್ಥಳಿ ಬಳಿ ಆಚರಿಸಲಾಯಿತು.

ರೈತ, ಕೃಷಿ-ಕಾರ್ಮಿಕ ಸಂಘಟನೆಯ ರಾಜ್ಯ ಅಧ್ಯಕ್ಷ ಡಾ. ಸುನೀತ್ ಕುಮಾರ್, ಎಐಎಂಎಸ್‌ಎಸ್ ರಾಜ್ಯ ಅಧ್ಯಕ್ಷ ಬಿ. ಆರ್. ಅಪರ್ಣ ಅವರುಗಳು ಭಗತ್ ಸಿಂಗ್ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು.

ಎಐಎಂಎಸ್‌ಎಸ್‌ನ ಜಿಲ್ಲಾ ಕಾರ್ಯದರ್ಶಿ ಭಾರತಿ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳು ಕಳೆದರೂ ಮಹಿಳೆಯರಿಗೆ ಭದ್ರತೆ ಸಿಗುತ್ತಿಲ್ಲ. ಈಗಲೂ ಮಕ್ಕಳು, ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ ನಡೆಯುತ್ತಿದೆ ಎಂದು ವಿಷಾದಿಸಿದರು.

ಸಮಾಜದಲ್ಲಿನ ಸಾಂಸ್ಕೃತಿಕ ಮಟ್ಟ ಕುಸಿಯುತ್ತಿದೆ. ಇದನ್ನೆಲ್ಲ ಬದಲಾಯಿಸಲು ಭಗತ್‌ಸಿಂಗ್ ವಿಚಾರ ತಿಳಿಯಬೇಕಿದೆ. ಅವರ ಸಮ ಸಮಾಜದ ಕನಸನ್ನು ನನಸು ಮಾಡಲು ಈ ದಿನ ಪ್ರತಿಯೊಬ್ಬರೂ ಸಂಕಲ್ಪ ತೊಡಬೇಕಿದೆ ಎಂದು ಹೇಳಿದರು.

ಎಐಡಿವೈಓನ ಮುಖಂಡ ಪರಶುರಾಮ್, ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ, ಎಸ್‌ಯುಸಿಐ (ಸಿ) ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಕೈದಾಳೆ ಮಾತನಾಡಿದರು.

## ಮಲೇಬೆನ್ನೂರು : ಗಾಂಧೀಜಿ-ಶಾಸ್ತ್ರೀಜಿ ಜಯಂತಿ

ಮಲೇಬೆನ್ನೂರು, ಅ.7- ಪಟ್ಟಣದ ಪುರಸಭೆ, ನಾಡ ಕಚೇರಿ, ಪೊಲೀಸ್ ಠಾಣೆ, ನೀರಾವರಿ ಇಲಾಖೆ, ಆರೋಗ್ಯ ಕೇಂದ್ರ, ಲಯನ್ಸ್ ಕ್ಲಬ್, ಪಿಎಸಿಎಸ್ ಸೇರಿದಂತೆ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಮತ್ತು ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀಜಿ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ನಾಡ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪ ತಹಶೀಲ್ದಾರ್ ಆರ್. ರವಿ, ಅವರು ಮಹಾನ್ ನಾಯಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು.

ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಸುಭಾನಿ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಂಘದ ಅಧ್ಯಕ್ಷ ಪಿ.ಆರ್. ಕುಮಾರ್, ಹಿರಿಯ ನಿರ್ದೇಶಕ ಸಿರಿಗೆರೆ ರಾಜಣ್ಣ, ಸಿ. ಅಬ್ದುಲ್ ಹಾದಿ, ಯೂನೂಸ್, ಸಂಘದ ಸಿಇಒ ಸಿದ್ದಪ್ಪ, ಪ್ರಕಾಶ್ ಇನ್ನಿತರರು ಹಾಜರಿದ್ದರು.

## ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಅಬ್ದುಲ್ ಜಬ್ಬಾರ್‌ಗೆ ಅಭಿನಂದನೆ



ಹರಪನಹಳ್ಳಿ

ಹರಪನಹಳ್ಳಿ, ಅ.7- ಕೆ. ಅಬ್ದುಲ್ ಜಬ್ಬಾರ್ ಸಾಬ್ ಅವರನ್ನು ಕೆಪಿಸಿಸಿ ಅಲ್ಪ ಸಂಖ್ಯಾತರ ಘಟಕದ ರಾಜ್ಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವ ಕಾಂಗ್ರೆಸ್ ಪಕ್ಷದ ವರಿಷ್ಠರಿಗೆ ಹಾಗೂ ನಾಯಕರಿಗೆ ತಾಲ್ಲೂಕು ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಎ. ಮೂಸಾ ಸಾಬ್ ಮತ್ತು ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಈ ಕುರಿತು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಎ. ಮೂಸಾ ಸಾಬ್ ಅವರು, ದಾವಣಗೆರೆಗೆಯ ಕೆ. ಅಬ್ದುಲ್ ಜಬ್ಬಾರ್ ಸಾಬ್ ಅವರನ್ನು ಕೆಪಿಸಿಸಿ ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷರನ್ನಾಗಿ ಮಾಡಿರುವುದರಿಂದ, ಈ ಭಾಗದ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಸಹಕಾರಿಯಾಗಲಿದ್ದು, ಈ ಹಿಂದೆ ಯಾವ ಪಕ್ಷವೂ ಅಲ್ಪಸಂಖ್ಯಾತರನ್ನು ಗುರುತಿಸಿರಲಿಲ್ಲ. ಆದರೆ, ಕಾಂಗ್ರೆಸ್ ಪಕ್ಷವು ಇವರ ಪಕ್ಷ ನಿಷ್ಠೆ ಗುರುತಿಸಿ, ಈ ಹುದ್ದೆ ನೀಡಿರುವುದು ಸ್ವಾಗತಾರ್ಹ ಎಂದು ಸಂತಸ ವ್ಯಕ್ತಪಡಿಸಿದರು.

ಜಬ್ಬಾರ್ ಸಾಬ್ ಅವರು ವಿಧಾನ ಪರಿಷತ್ ಸದಸ್ಯರಾಗಿದ್ದಾಗ ತಾಲ್ಲೂಕಿಗೆ ಅತಿ ಹೆಚ್ಚು ಅನುದಾನ ನೀಡಿ, ಅಲ್ಪ ಸಂಖ್ಯಾತರ ಅಭಿವೃದ್ಧಿಗೆ ಸಹಕರಿಸಿದ್ದಾರೆ ಎಂದು ಪುರಸಭೆ ಮಾಜಿ ಸದಸ್ಯ ಡಿ. ಜಾವೂರ್ ಹೇಳಿದರು.

ಈ ವೇಳೆ ತಾಲ್ಲೂಕು ಅಲ್ಪ ಸಂಖ್ಯಾತರ ಘಟಕದ ಕಾರ್ಯದರ್ಶಿ ಬಿ. ಮೆಹಬೂಬ್ ಸಾಬ್, ಸಂಘಟನಾ ಕಾರ್ಯದರ್ಶಿ ನಸ್ರುಲ್ಲಾ, ಪದಾಧಿಕಾರಿಗಳಾದ ಮೌಲಾನಾ ಸೈಯದ್ ಅಹ್ಮದ್, ಜಲಾಲಿ ಬುಡೇನ್ ಸಾಬ್, ಡ್ರೈವರ್ ಇಮಾಮ್ ಸಾಬ್, ಅಂಜುಮಾನ್, ಸದಸ್ಯ ಬಿ. ಫೈಜುಲ್ಲಾ, ಸೈದುಲ್ಲಾ, ಕೆ. ಜಬೀವುಲ್ಲಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಕರ್ನಾಟಕ ಜನಶಕ್ತಿ ಜಿಲ್ಲಾ ಸಮಿತಿಯಿಂದ ಭಗತ್ ಸಿಂಗ್ ಜನ್ಮದಿನಾಚರಣೆ



ದಾವಣಗೆರೆ, ಅ.7- ಕರ್ನಾಟಕ ಜನಶಕ್ತಿ ಜಿಲ್ಲಾ ಸಮಿತಿ ವತಿಯಿಂದ ಭಗತ್ ಸಿಂಗ್ ಅವರ 114ನೇ ಜನ್ಮ ದಿನಾಚರಣೆಯನ್ನು ನಗರದಲ್ಲಿ ಮೊನ್ನೆ ಆಚರಿಸಲಾಯಿತು.

ರಾಜ್ಯ ಸಮಿತಿ ಸದಸ್ಯ ಸತೀಶ್ ಅರವಿಂದ್ ಮಾತನಾಡಿ, ದುಡಿಯುವ ಜನ ವರ್ಗವಾದ ರೈತರು, ಕಾರ್ಮಿಕರು ದೇಶದ ಚುಕ್ಕಾಣಿಯನ್ನು ಹಿಡಿಯಬೇಕು ಎಂಬುದು ದೇಶದಲ್ಲಿರುವ ಅಸಮಾನತೆಯ ವಿರುದ್ದ ಹೋರಾಡಿದ ಮಹಾನ್ ವ್ಯಕ್ತಿ ಭಗತ್ ಸಿಂಗ್ ಅವರ ಆಶಯವಾಗಿತ್ತು. ಅವರ ಆಲೋಚನಾ ಕ್ರಮ ಜನತೆಯ ವಿಮೋಚನೆಯ ದಾರಿಯಾಗಿತ್ತು. ಅದಕ್ಕಾಗಿ ಹುತಾತ್ಮರಾಗುವವರೆಗೂ ಹೋರಾಡಿದ ಕೀರ್ತಿ ಭಗತ್ ಸಿಂಗ್ ಅವರಿಗೆ ಸಲ್ಲುತ್ತದೆ. ಅವರ ಹಾದಿಯಲ್ಲಿ ಇಂದಿನ ಯುವಜನರು ಸಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮುಖಂಡರಾದ ಆದಿಲ್ ಖಾನ್, ಹಯಾತ್, ಬಸವರಾಜ್, ಸುಭಾನಿ, ದಾದಾಪೀರ್, ಮೋಸಿನ್ ಮತ್ತು ವಿದ್ಯಾರ್ಥಿಗಳು ಇದ್ದರು.

## ಗಾನಯೋಗಿ ಸಂಸ್ಥೆ ಸಂಗೀತ ಪಾಠಶಾಲೆ ಆರಂಭ



ರಾಣೇಬೆನ್ನೂರು

ರಾಣೇಬೆನ್ನೂರು, ಅ.7- ಹೊನ್ನಾಳಿ ಶ್ರೀಗಳಿಗೆ ರಾಣೇಬೆನ್ನೂರು ತವರೂರು ಇದ್ದ ಹಾಗೆ. ಹಿಂದಿನ ಒಡೆಯರ್ ಚಂದ್ರಶೇಖರ ಶ್ರೀಗಳಿಗೂ ಸಹ ರಾಣೇಬೆನ್ನೂರು ಭಕ್ತರ ಬಗ್ಗೆ ಅಪಾರ ಪ್ರೀತಿ. ಈಗಿನ ಶ್ರೀಗಳು ಸಹ ಅದನ್ನು ಮುಂದುವರೆಸಿದ್ದಾರೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ಅವರು ಹೊನ್ನಾಳಿ ಹಿರೇಕಲ್ಮಠದ ಡಾ. ಚನ್ನಮಲ್ಲಿಕಾರ್ಜುನ ಶ್ರೀಗಳ ಸಾನ್ನಿಧ್ಯದಲ್ಲಿ ಗಾನಯೋಗಿ ಸಾಂಸ್ಕೃತಿಕ ಸಂಸ್ಥೆಯ ಪುಟ್ಟರಾಜ ಗವಾಯಿಗಳ ಸಂಗೀತ ಪಾಠಶಾಲೆ ಉದ್ಘಾಟಿಸಿ ಮಾತನಾಡಿದರು.


ಬಡತನದಿಂದಾಗಿ ಅವರಲ್ಲಿರುವ ಪ್ರತಿಭೆ ನಶಿಸಬಾರದು ಎನ್ನುವ ಸದುದ್ದೇಶದಿಂದ, ಸಂಗೀತದ ಅಭಿರುಚಿ ಉಳ್ಳ ಬಡವರಿಗೆ ಉಚಿತವಾಗಿ ಸಂಗೀತ ಪಾಠ ಹೇಳಿಕೊಡುವುದಾಗಿ ಗಾನಯೋಗಿ ಸಾಂಸ್ಕೃತಿಕ ಕಲಾ ಸಂಸ್ಥೆ ಅಧ್ಯಕ್ಷ ಮಾಂತೇಶ ಚಿಕ್ಕಮಠ ಹೇಳಿದರು.

## ಜಿಎಂಐಟಿಯಲ್ಲಿ ಗಾಂಧೀಜಿ-ಶಾಸ್ತ್ರೀಜಿ ಜಯಂತಿ

ದಾವಣಗೆರೆ, ಅ.7- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಹಾತ್ಮಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಆಚರಿಸಲಾಯಿತು.

ಶ್ರೀಶೈಲ ವಿದ್ಯಾಸಂಸ್ಥೆ ಸಲಹೆಗಾರ ರುದ್ರಯ್ಯ ಮಹಾನ್ ನಾಯಕರ ಕುರಿತು ಮಾತನಾಡಿದರು. ಜಿ.ಎಂ. ಪಾಲಿಟೆಕ್ನಿಕ್ ಪ್ರಾಂಶುಪಾಲ ಡಾ. ಬಿ.ಆರ್. ಶ್ರೀಧರ್ ಭಜನೆಗಳನ್ನು ಹೇಳಿಕೊಟ್ಟರು. ಐಎಸ್ಇ ವಿಭಾಗದ ಮುಖ್ಯಸ್ಥ ಡಾ. ಬಿ.ಎಸ್. ಸುನೀಲ್ ಕುಮಾರ್ ನಿರೂಪಿಸಿದರು. ಕಾಲೇಜು ಗ್ರಂಥಪಾಲಕ ಶಶಿಕುಮಾರ್ ವಂದಿಸಿದರು.

## ಶ್ರೀ ಭದ್ರಕಾಳಮ್ಮದೇವಿಗೆ ಶೈಲಪುತ್ರಿ ಅಲಂಕಾರ



ಮಲೇಬೆನ್ನೂರು, ಅ.7- ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿರುವ ಶ್ರೀ ಭದ್ರಕಾಳಮ್ಮ ದೇವಿಗೆ ಶರನ್ನವರಾತ್ರಿ ಪ್ರಯುಕ್ತ ಮೊದಲನೇ ದಿನ ಶೈಲಪುತ್ರಿ ದೇವಿಯ ವಿಶೇಷ ಅಲಂಕಾರ ಮಾಡಲಾಗಿತ್ತು.

## ನಮ್ಮ ಅಡುಗೆ ಮನೆಯಲ್ಲಿ ಇರುವುದೇ ಮನೆ ಮದ್ದುಗಳು

ಬೂದಿಹಾಳ್ ಗ್ರಾಮದಲ್ಲಿ ಪೌಷ್ಟಿಕ ಆಹಾರ ಮೇಳ




ದಾವಣಗೆರೆ, ಅ.7- ತಾಲ್ಲೂಕಿನ ಶಿವನಗರ ವಲಯದ ಬೂದಿಹಾಳ್ ಗ್ರಾಮದ ಸಂಕಲ್ಪ ಜ್ಞಾನ ವಿಕಾಸ ಕಾರ್ಯಕ್ರಮದಲ್ಲಿ ಪೌಷ್ಟಿಕ ಆಹಾರ ಮೇಳ ಕಾರ್ಯಕ್ರಮ ನಡೆಯಿತು.

ಪ್ರಾಥಮಿಕ ಆರೋಗ್ಯ ಇಲಾಖೆಯ ಡಾ. ರುದ್ರೇಶ್ ಅವರು ಭಾಗವಹಿಸಿ, ಪೌಷ್ಟಿಕ ಆಹಾರದ ಬಗ್ಗೆ ಹಾಗೂ ಅದನ್ನು ಯಾವ ರೀತಿ ಸೇವನೆ ಮಾಡಬೇಕು, ಯಾವ ಪೌಷ್ಟಿಕ ಆಹಾರ ಸಿಗುತ್ತದೆ ಹಾಗೂ ದಿನನಿತ್ಯದ ಆಹಾರದಲ್ಲಿ ಸಿರಿಧಾನ್ಯದ ಕಾಳುಗಳನ್ನು ಬಳಕೆ ಮಾಡುವ ಬಗ್ಗೆ ಹಾಗೂ ನಮ್ಮ ಅಡುಗೆ ಮನೆಯಲ್ಲಿ ಇರುವಂತಹ ವಸ್ತುಗಳೇ ನಮ್ಮ ದೇಹಕ್ಕೆ ಆರೋಗ್ಯ ಕೊಡುತ್ತವೆ. ನಮ್ಮ ಅಡುಗೆ ಮನೆಯಲ್ಲಿ ಇರುವುದೇ ಮನೆ ಮದ್ದುಗಳು ಹಾಗೂ ಅವುಗಳನ್ನು ಯಾವ ರೀತಿ ಸೇವನೆ ಮಾಡಬೇಕು ಎನ್ನುವುದರ ಬಗ್ಗೆ ಹಾಗೂ ಸ್ವಚ್ಛತೆಯ ಬಗ್ಗೆ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು.

ಅತಿಥಿಯಾಗಿ ನ್ಯೂ ಡೆಲ್ಲಿ ಪಬ್ಲಿಕ್ ಸ್ಕೂಲ್ ನ ಶಿಕ್ಷಕ ಶಶಿಧರ್ ಅವರು ಅಡುಗೆ ಮನೆಯಲ್ಲಿ ಹೆಣ್ಣು ಮಕ್ಕಳಿಗೆ ಪೌಷ್ಟಿಕ ಆಹಾರದ ಬಗ್ಗೆ ಮಾಹಿತಿ ಕೊಟ್ಟರೆ ಆ ಕುಟುಂಬ ಪೌಷ್ಟಿಕವಾಗಿ ಇರಲಿಕ್ಕೆ ಸಾಧ್ಯವಾಗುತ್ತದೆ ಎಂದರು.

ಊರಿನ ಮುಖಂಡರಾದ ಗುರುಸಿದ್ದಯ್ಯ, ಗೌಡ್ರ ಗುರುಸಿದ್ದ ಬಸಜ್ಜ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬೂದಿಹಾಳ್ ಮುಖ್ಯ ಶಿಕ್ಷಕರಾದ ಶಾಂತವೀರಮ್ಮ, ಸಾವಿತ್ರಮ್ಮ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರೈತ ಸಂಘದಿಂದ ತಹಶೀಲ್ದಾರರಿಗೆ ಮನವಿ



ಹರಿಹರ

ಹರಿಹರ, ಅ.7 - ಉತ್ತರ ಪ್ರದೇಶದಲ್ಲಿ ಪ್ರತಿಭಟನಾ ನಿರತರ ರೈತರ ಮೇಲೆ ಹಿಂಸಾಚಾರ ನಡೆಸಿ, ರೈತರ ಮರಣಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ತಾಲ್ಲೂಕು ರೈತ ಸಂಘದ ವತಿಯಿಂದ ಪ್ರತಿಭಟಿಸಿ, ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ರೈತ ಮುಖಂಡರು ಮಾತನಾಡಿ, ಹಲ್ಲೆ ನಡೆಸಿದ ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು. ಪ್ರತಿಭಟನೆ ಮಾಡುವ ರೈತರಿಗೆ ಸೂಕ್ತ ಪೊಲೀಸ್ ಬಂದೋಬಸ್ತ್ ನೀಡುವಂತೆ ಒತ್ತಾಯಿಸಿದರು. ರೈತ ಮುಖಂಡರುಗಳಾದ ಪ್ರಭುಗೌಡ, ಶೇಖರಪ್ಪ, ಹೆಚ್. ಬಿ. ರಾಜಪ್ಪ, ಕೆ.ಜಿ. ನಾರಪ್ಪ, ಮಹೇಶಪ್ಪ ದೊಗ್ಗಳ್ಳಿ, ಚಂದ್ರಪ್ಪ, ಪಾಲಾಕ್ಷಪ್ಪ ಸಿರಿಗೆರೆ, ವೀರಪ್ಪ, ರೇವಣಸಿದ್ದಪ್ಪ ಇನ್ನಿತರರಿದ್ದರು.


**ತಕ್ಷಣ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಯಲ್ಲಿ Coffee ಮತ್ತು Serve ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. (Age 20 to 30) (ಹೋಟೆಲ್‌ನಲ್ಲಿ ಕೆಲಸ ಮಾಡಿದವರಿಗೆ ಆದ್ಯತೆ) ಕೂಡಲೇ ಸಂಪರ್ಕಿಸಿ : Anjaneya Badavane, Davangere
Ph. : 93804 69079

**ಮನೆ ಮಾರಾಟಕ್ಕಿದೆ**
ದಾವಣಗೆರೆ ತರಳಬಾಳು ಬಡಾವಣೆ, 2ನೇ ಮೇನ್, 3ನೇ ಕ್ರಾಸ್‌ನ ಕಾರ್ನರ್ ಗ್ರೌಂಡ್‌ಫ್ಲೋರ್‌ನಲ್ಲಿ 3 ಬೆಡ್ ರೂಂನ ಮನೆ ಹಾಗೂ ಮೊದಲ ಮಹಡಿಯಲ್ಲಿ 2 ಬೆಡ್ ರೂಂನ ಎರಡು ಮನೆಗಳು ಇರುವ ಬಿಲ್ಡಿಂಗ್ ಮಾರಾಟಕ್ಕಿದೆ.
94814 52642

**ಬೇಕಾಗಿದ್ದಾರೆ**
ಜನನಿ (ಸಿರಿಧಾನ್ಯಗಳ ಕಣಜ) ಮಿಲೆಟ್ ಹೆಲ್ತ್ ಮಿಕ್ಸ್ ಗೆ ದಾವಣಗೆರೆ ಜಿಲ್ಲೆಯ ತಾಲ್ಲೂಕು ವಿತರಕರು (Distributers) ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. : 77601 04892

**ವಿದ್ಯಾನಗರ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
30x50 East, 30x50 West, 30x40 30x40 West ಅಕ್ಕ-ಪಕ್ಕ, 40 ಅಡಿ ರೋಡಿಗಿದೆ. 30x50, 30x50 West, ಅಕ್ಕ-ಪಕ್ಕ, 30x40 East
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಶಿವ ಪಾರ್ವತಿ ಲೇಔಟ್ ಪಕ್ಕದ ಬನಶಂಕರಿ ಬಡಾವಣೆಯಲ್ಲಿ 30×50 ಉತ್ತರ ಅಕ್ಕ- ಪಕ್ಕ, 30×50 ಪಶ್ಚಿಮ ಅಕ್ಕ- ಪಕ್ಕ,
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಗ್ರಾಮಾಂತರದವರಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಬಿಲ್ಡಿಂಗ್ ಮಾರಾಟಕ್ಕಿದೆ**
ದಾವಣಗೆರೆ ಸಿಟಿ 8ನೇ ವಾರ್ಡ್ ಲೆನಿನ್ ನಗರದಲ್ಲಿ # 2345/50 48+46/ 2x30 ಅಳತೆಯ ಆರ್.ಸಿ.ಸಿ ರೂಫಿಂಗ್ ಬಿಲ್ಡಿಂಗ್ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
94486 65631

**ಬೇಕಾಗಿದ್ದಾರೆ**
KSRTC ನಮ್ಮ ಕಾರ್ಗೋ ಆಫೀಸ್ ನಲ್ಲಿ ಬೆಂಗಳೂರು ಮತ್ತು ದಾವಣಗೆರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಪುರುಷರು ಬೇಕಾಗಿದ್ದಾರೆ ಬೆಂಗಳೂರಿನಲ್ಲಿ ಕೆಲಸ ಮಾಡುವವರಿಗೆ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ ಮೊದಲು ಬಂದವರಿಗೆ ಆದ್ಯತೆ ಹೆಚ್ಚಿನ ಮಾಹಿತಿಗಾಗಿ KSRTC ಬಸ್ ಸ್ಟ್ಯಾಂಡ್ ಸೇವೆಗೆ ಕಾಲೇಜ್ ರೋಡ್ ಹೈಸ್ಕೂಲ್
7338203872, 9008475410

**ಮಾರಾಟಕ್ಕೆ**
ಪಿಸಾಳೆ (ಮಹಾಲಕ್ಷ್ಮಿ ಕುಂದವಾಡ) ಲೇಔಟ್ ಸೈಟ್ (ಪೂರ್ವ) 20×47, ತರಳಬಾಳು ಬಡಾವಣೆ ಸೈಟ್(ದಕ್ಷಿಣ) 30×50, ಎಸ್.ಎಸ್. ಲೇಔಟ್- ಸೈಟ್ 40×63, ಮಹಾಲಕ್ಷ್ಮಿ ಲೇಔಟ್ ಸೈಟ್ (ಉತ್ತಮ್ ಚಂದ್- ಪಶ್ಚಿಮ) 35×61, ಶಿಕ್ಷಕರ ಬಡಾವಣೆ 2ನೇ ಹಂತ (ದಕ್ಷಿಣ-ಆವರಗೆರೆ) 30×40,
78996 36597, 99165 25828

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x60 East, 30x40, 30x40 North, ಅಕ್ಕ-ಪಕ್ಕ, 30x50 West, 30x50 East, 60 ಅಡಿ ರೋಡಿಗಿದೆ. 30x50 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್‌ರೂಂ, ಡಬಲ್ ಬೆಡ್‌ರೂಂ, ವಿದ್ಯಾನಗರ, ಆಂಜನೇಯ ಬಡಾವಣೆಯಲ್ಲಿ. (ಕೇವಲ 1/2 ಪರ್ಸೆಂಟ್ ಕಮೀಷನ್ ಆಧಾರದ ಮೇಲೆ)
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ PUC, SCIENCE, COMMERCE, ARTS ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.) ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಗೃಹ ಸಾಲ / ಕಾರು ಸಾಲ**
ಸೈಟ್ ಖರೀದಿ, ಮನೆ ಕಟ್ಟಲು, ಮನೆ ಖರೀದಿಸಲು ಮತ್ತು ಕಾರು ಖರೀದಿಸಲು
DSA, Canara Bank, Indian Bank & HDFC Bank
9611866449, 8073345822

**WANTED**
Audit Assistants 4 posts Female Qulaification : B.Com Pass/Fail with Computer Tally Knowledge. Walk-In- Interview on 08.10.2021 & 09.10.2021 At 10 AM to 8PM
Fayaz Ahammed & Associates
Muslim Hostel, Ambedkar Circle, Davanagere
Mo: 94480 45778

**ಮನೆ ಮಾರಾಟಕ್ಕಿದೆ**
30x40 ಉತ್ತರಾಭಿಮುಖ, ಸಿದ್ಧಗಂಗಾ ಬಡಾವಣೆ, ಎಸ್.ಎಸ್. ಆಸ್ಪತ್ರೆ ಹಿಂಭಾಗ, ಶ್ರೀರಾಮ್ ನಗರದ ಹತ್ತಿರ, ದಾವಣಗೆರೆ.
95350 12779

**ಖಾಲಿ ನಿವೇಶನ ಮಾರಾಟಕ್ಕಿದೆ**
30x40, (ಉತ್ತರ ದಿಕ್ಕಿನ) 106 ಡೋರ್ ನಂಬರಿನ ಫೈನಲ್ ಅಪ್ರೂವಲ್ ಸೈಟ್ ವಿಜಯನಗರ ಬಡಾವಣೆ, ದಾವಣಗೆರೆಯಲ್ಲಿ ಮಾರಾಟಕ್ಕಿದೆ.
87920 96172

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859, 90080 67049

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
77603 16576
90080 55813

**ಮನೆ ಲೀಸ್‌ಗೆ ಇದೆ**
4th ಮೇನ್, 1st ಕ್ರಾಸ್ ವಿನೋಬ ನಗರ ರಾಯಲ್ ಚೌಟ್ರಿ ರೋಡ್, ಸೇಂಟ್ ಮೇರಿ ಸ್ಕೂಲ್ ಹತ್ತಿರ, ಎರಡು ಬೆಡ್‌ರೂಂ ಉಳ್ಳ ಮೊದಲನೇ ಮಹಡಿಯ ಮನೆ ಲೀಸ್‌ಗೆ ಇದೆ.
95382 20805

**ವಾಹನ ಮಾರಾಟಕ್ಕಿದೆ**
ಉತ್ತಮ ಸ್ಥಿತಿಯಲ್ಲಿರುವ 2012 Model Force Kargo King ವಾಹನ ಮಾರಾಟಕ್ಕಿದೆ. ಕೆ.ಬಿ.ಆರ್ ಇಂಡಸ್ಟ್ರೀಸ್, ಟಿ.ಸಿ ಲೇಔಟ್, ಆರ್.ಎಂ.ಸಿ ಲಿಂಕ್ ರೋಡ್, ದಾವಣಗೆರೆ-577001
Ph. 6362147549

**ಬೇಕಾಗಿದ್ದಾರೆ**
ಕಾರ್ಖಾನೆಯಲ್ಲಿ Machin Operating ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC or ITI, ಸಮಯ: ಬೆಳಿಗ್ಗೆ 9 ರಿಂದ ಸಂಜೆ 6 (ದಾವಣಗೆರೆ ಕಾರ್ಮಿಕರಿಗೆ ಆದ್ಯತೆ) ಹೆಚ್ಚಿನ ಮಾಹಿತಿಗೆ.
ಸಂಪರ್ಕಿಸಿ: 87110 63041

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಅರ್ಹತೆ: SSLC & PUC ಸ್ಥಳ: ಸರಸ್ವತಿ ಬಡಾವಣೆ, ಮೇನ್ ರೋಡ್, ನಿಟ್ಟುವಳ್ಳಿ,. ಸಂಪರ್ಕಿಸಿ
81232 18577

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆ ಕೆಲಸ ಹಾಗೂ ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಸ್ಟ್ಯಾಂಡರ್ಡ್ ಮಹಿಳೆ ಬೇಕಾಗಿದ್ದಾರೆ. ಊಟ, ವಸತಿ ವ್ಯವಸ್ಥೆ ಇದೆ. ಸಂಬಳ: 30,000/- ಸಂಪರ್ಕಿಸಿ
78291 91921

**ವಧು ಬೇಕಾಗಿದ್ದಾರೆ**
ಹಿಂದೂ ಜನಾಂಗದ ಹುಡುಗ, 2ನೇ ಮದುವೆ, ಪತ್ನಿ ತೀರಿಕೊಂಡಿರುತ್ತಾರೆ. (ಶ್ರೀಮಂತ ಕುಟುಂಬಕ್ಕೆ) ವಧು ಬೇಕಾಗಿದ್ದಾರೆ. ಸ್ಟ್ಯಾಂಡರ್ಡ್ ಕುಟುಂಬದ ವಿಧವೆ, ಗಂಡ ಬಿಟ್ಟಿರುವವರು, ಪತಿ ತೀರಿಕೊಂಡವರು ಮತ್ತು ಮಕ್ಕಳು ಇರುವವರು. ಸಂಪರ್ಕಿಸಿ
90351 50000

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ. ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**"ಸೂರ್ಯ" ನವೋದಯ ಹಾಸ್ಟೆಲ್**
(ಯಶಸ್ವಿ 26ನೇ ವರ್ಷಕ್ಕೆ ಪಾದಾರ್ಪಣೆ)
ಇದೇ ತಿಂಗಳು ಅಂದರೆ ಅಕ್ಟೋಬರ್ 8 ರಿಂದ ನವೋದಯ ಹಾಸ್ಟೆಲ್ ಆರಂಭವಾಗುತ್ತಿದೆ. ತರಬೇತಿ ನೀಡುವವರು ಶ್ರೀ ಸುರೇಶ್ ಪಿ. ಮುರಗಿ M.Sc., B.Ed, ಹಾಸ್ಟೆಲ್ ವಿಳಾಸ: #844/11 ಹೊಂಗಿರಣ, ಜಯನಗರ 'ಬಿ' ಬ್ಲಾಕ್, ಭಗೀರಥ ಸರ್ಕಲ್ ಹತ್ತಿರ, ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ.
99028 24909, 98447 48763

**JOB OPPORTUNITY**
We need a Tally Faculty (Female)
Any Graduate with 0-2 years can send their CV within 12-10-21 to hardsoftdvg@gmail.com or call us: 97312 18567

**ಮನೆ ಮಾರಾಟಕ್ಕಿದೆ**
15×45 ಅಳತೆಯ ಮೂರು ಅಂತಸ್ತಿನ ಮನೆ ಶ್ಯಾಮನೂರಿನಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ :
83104 56621

**ಮನೆ ಬಾಡಿಗೆಗೆ/ಲೀಸ್‌ಗಿದೆ**
2 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆ/ಲೀಜ್‌ಗಿದೆ. ಸಂಪರ್ಕಿಸಿ.
93410 12022

**ಜಮೀನು ಮಾರಾಟಕ್ಕಿದೆ**
ತೋಳಹುಣಸೆ ಗ್ರಾಮದಲ್ಲಿ ರೇಷ್ಮೆ ಇಲಾಖೆಗೆ ಹೋಗುವ ದಾರಿಯಲ್ಲಿ ಒಂದು ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
87674 87922

**WANTED**
MA,B.Ed-Economics, English, Sociology, BA, B.Ed- English, Hindi, Kannada, MP.Ed, BP.Ed, CP.Ed, Attender.
Contact: 97402 58276

**ಉಚಿತ ಭವಿಷ್ಯ ಖಚಿತ ಪರಿಹಾರ ನಂ. 1 ವಶೀಕರಣ ಸ್ಪೆಷಲಿಸ್ಟ್**
ನೀವು ಇಷ್ಟಪಟ್ಟವರು, ನಿಮ್ಮಂತಾಗಲು, ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಅತ್ತೆ, ಸೊಸೆ ಕಿರಿಕಿರಿ. 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
96068 18273

**ಕೆಲಸಕ್ಕೆ ಬೇಕಾಗಿದ್ದಾರೆ**
ಮ್ಯಾನುಯಲ್ ಬಿಲ್ ಬರೆಯಲು ಮತ್ತು ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ.
ಹರ್ಷ ಹಾರ್ಡ್‌ ವೇರ್ & ಪೈಂಟ್ಸ್, ಸುಭಾಷ್ ರಸ್ತೆ, ಅಶೋಕ ಚಿತ್ರ ಮಂದಿರ ಎದುರು, ರೈಲ್ವೆ ಗೇಟ್ ಹತ್ತಿರ ದಾವಣಗೆರೆ-577001

**ಫಸಲು ಕೊಡುವ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 16 ಕಿ.ಮೀ ದೂರದಲ್ಲಿ ಅಪ್ರೋಸ್ ಮಾವು 4 ಎ. 30 ಸೆಂಟ್ಸ್, ತೆಂಗು ಮತ್ತು ಅಡಿಕೆ ತೋಟ 2 ಎ. 15 ಸೆಂಟ್ಸ್, ಮತ್ತು ತೇಗದ ಮರ 12 ವರ್ಷದ್ದು 0.30 ಸೆಂಟ್ಸ್, ಒಟ್ಟು 7.16 ಸೆಂಟ್ಸ್, 2 ಬೋರ್‌ವೆಲ್, ರಸ್ತೆ ಮತ್ತು ತಂತಿಬೇಲಿ ಹಾಗೂ ಡ್ರಿಪ್ ಹೊಂದಿರುವ ತೋಟ ಮಾರಾಟಕ್ಕಿದೆ. ಸಂಪರ್ಕಿಸಿ:
98809 33630

**SHOP FOR RENT**
With wash room facility. N.R Road Davangere
94483 69523

**ಉಚಿತ ಕಾರ್ಯಾಗಾರ**
KAS/PDO/PSI/FDA ಶ್ರೀ ಮರಿಗೌಡರ್ ಸರ್ (Geography), ಶ್ರೀ ವಸಂತ್ ಸರ್ (G.K) ಶ್ರೀ ಸತೀಶ್ ಕುರುಡೇಕರ್ (Mental ability) ಇವರಿಂದ ಕಾರ್ಯಾಗಾರ ನಡೆಸಲಾಗುವುದು. ದಿ.10.10.2021 (ಭಾನುವಾರ) ಸ್ಥಳ: ರೋಟರಿ ಬಾಲಭವನ, ದಾವಣಗೆರೆ. ಸಮಯ: ಬೆಳಿಗ್ಗೆ 10 ರಿಂದ 4 ಗಂಟೆಯವರೆಗೆ. ಸಮೃದ್ಧಿ ಕೋಚಿಂಗ್ ಅಕಾಡೆಮಿ.
63646 40296

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ಸಂಬಳ 8,500 ರಿಂದ 9000 + ESI/PF 8 ತಾಸುಗಳ ಕೆಲಸ
ಸಂಪರ್ಕಿಸಿ: SNA ಪ್ಲಾಜಾ, ಪಿ.ಬಿ. ರಸ್ತೆ, ದಾವಣಗೆರೆ.
91130 53483

**ಮನೆ ಲೀಜ್‌ಗೆ ಇದೆ**
ನಗರದ ಹೃದಯಭಾಗ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್, 2ನೇ ಮೇನ್, 2ನೇ ಕ್ರಾಸ್‌ನಲ್ಲಿ ಡಬಲ್ ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇರುವ ಸುಸಜ್ಜಿತ 1ನೇ ಮಹಡಿ, ಪೂರ್ವ ಬಾಗಿಲು ಹಾಗೂ ಗ್ರಾನೈಟ್ ಫ್ಲೋರಿಂಗ್ ಇರುವ ಮನೆ (6 ಲಕ್ಷಕ್ಕೆ)ಲೀಸ್ ಗೆ ಇದೆ.
97417 46205, 73493 97287

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು 08.10.2021ರ ಶುಕ್ರವಾರದಂದು ಮಾತ್ರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಸೈಟ್ ಬೇಕಾಗಿದೆ**
KHB ಲೇಔಟ್‌ನಲ್ಲಿ ಪೂರ್ವ ದಿಕ್ಕಿನ 30×40 ಅಥವಾ 30×50 ಸೈಟ್ ಬೇಕಾಗಿದೆ. (Immediate registration)
86181 82332

**ಮನೆಗಳು ಬಾಡಿಗೆಗಿವೆ**
S.S, A. ಬ್ಲಾಕ್ 2ನೇ ಕ್ರಾಸ್, V.V ರೆಸಿಡೆನ್ಸ್ 1st ಫ್ಲೋರ್, ವಾಸ್ತು ಪ್ರಕಾರ ಇರುವ 2 ಬೆಡ್ ರೂಂನ ಮನೆಗಳು ಖಾಲಿ ಇವೆ. ಕಾರ್ಪೊರೇಷನ್ ನೀರು ಮತ್ತು ಬೋರ್‌ವೆಲ್ ನೀರಿನ ಸೌಲಭ್ಯ ಇರುತ್ತದೆ ಹಾಗೂ ಕಾರ್ ಪಾರ್ಕಿಂಗ್ ಇದೆ.
94487 27266, 94481 34340

**ಪುಸ್ತಕಗಳು ದೊರೆಯುತ್ತವೆ**
ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಪರೀಕ್ಷೆಯ ಪುಸ್ತಕಗಳು ದೊರೆಯುತ್ತವೆ. ವಿವರಗಳಿಗೆ ಭೇಟಿ ಕೊಡಿ.
ಚೇತನ ಬುಕ್ ಹೌಸ್ ಅಕ್ಕಮಹಾದೇವಿ ರಸ್ತೆ, ಹಳೆ ಮನೆ ಹೋಟೆಲ್ ಎದುರು, ದಾವಣಗೆರೆ.
94816 89201, 80504 07799

ರಕ್ತದಾನ, ಶ್ರೇಷ್ಠದಾನ

# ಡಿಸಿಎಂ ಟೌನ್‌ಶಿಪ್‌ನ ವಾಸವಿ ದೇವಸ್ಥಾನದಲ್ಲಿ ದಸರಾ ಉತ್ಸವ



ದಾವಣಗೆರೆಯ ಪಿ.ಬಿ. ರಸ್ತೆಯ ಡಿಸಿಎಂ ಟೌನ್‌ಶಿಪ್‌ನಲ್ಲಿರುವ ವಾಸವಿ ಅಮ್ಮನವರ ದೇವಸ್ಥಾನದಲ್ಲಿ ನವರಾತ್ರಿ ಹಬ್ಬದ ಪ್ರಯುಕ್ತ ಪ್ರತಿದಿನ ವಿಶೇಷ ಅಲಂಕಾರ ಮಾಡಲಾಗುತ್ತಿದೆ. ಇಂದು ಶ್ರೀ ಅಮ್ಮನವರಿಗೆ ಮಹಾಲಕ್ಷ್ಮಿ ಅಲಂಕಾರ ಮಾಡಲಾಗುತ್ತದೆ.

ಪ್ರತಿದಿನ ಸಂಜೆ 6.10 ರಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ, ಮಹಿಳಾ ಸಂಘದವರಿಂದ ಭಜನಾ ಕಾರ್ಯಕ್ರಮವಿರುತ್ತದೆ. ಸಂಜೆ 7.30 ರಿಂದ ವಿಶೇಷ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗಿಸಲಾಗುವುದು ಎಂದು ಶ್ರೀ ವಾಸವಿ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಬಿ.ಹೆಚ್. ಅಶೋಕ್, ದೇವಸ್ಥಾನ ಅರ್ಚಕರಾದ ರಂಗನಾಥ ಭಾರ್ಗವ್ ತಿಳಿಸಿದ್ದಾರೆ.

# ನವರಾತ್ರಿ ಉತ್ಸವ : ನಗರದ ವಿವಿಧ ದೇವಸ್ಥಾನಗಳಲ್ಲಿ ಪುರಾಣ

**ದುಗ್ಗಮ್ಮನ ದೇವಸ್ಥಾನದಲ್ಲಿ ಪ್ರವಚನ :** ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಇಂದು ಶ್ರೀ ದೇವಿಗೆ ವೃಷಭ ವಾಹನ ಅಲಂಕಾರ ಮಾಡಲಾಗುತ್ತದೆ.

ರಾತ್ರಿ 8 ಗಂಟೆಗೆ ದೇವಸ್ಥಾನದ ಪಾದಗಟ್ಟೆ ಹತ್ತಿರ ಶ್ರೀ ದೇವಿ ಪುರಾಣ ಪ್ರವಚನ ನಡೆಯಲಿದೆ. ಹಾವೇರಿ ಜಿಲ್ಲೆಯ ಹಾವನೂರು ಬಳಿಯ ಕರಡಗಿ ಗ್ರಾಮದ ಹರಿಕಥಾ ವಿದ್ವಾನ್ ಶ್ರೀ ರೇವಣಸಿದ್ದಯ್ಯ ಶಾಸ್ತ್ರಿ ಮತ್ತು ಸಂಗಡಿಗರು ಪ್ರವಚನವನ್ನು ನಡೆಸಿಕೊಡುವರು.

**ಶಾರದಾಂಬ ದೇವಸ್ಥಾನ :** ಎಸ್. ನಿಜಲಿಂಗಪ್ಪ ಬಡಾವಣೆಯ ವರ್ತುಲ ರಸ್ತೆಯಲ್ಲಿರುವ ಶ್ರೀ ಗಣಪತಿ, ಶ್ರೀ ಶಾರದಾಂಬ, ಶ್ರೀ ಚಂದ್ರಮೌಳೀಶ್ವರ ಮತ್ತು ಶ್ರೀ ಶಂಕರಾಚಾರ್ಯರ ದೇವಸ್ಥಾನದಲ್ಲಿ ಶ್ರೀ ದೇವಿಗೆ ವೃಷಭ ವಾಹನ (ಮಹೇಶ್ವರಿ) ಅಲಂಕಾರ ಮಾಡಲಾಗುತ್ತದೆ.

ಸಂಜೆ 5 ಗಂಟೆಗೆ ಶ್ರೀ ಲಲಿತ ಸಹಸ್ರ ನಾಮ ಹಾಡುಗಳು, ಸಂಜೆ 6 ಗಂಟೆಗೆ ಜಗನ್ನಾಥ ನಾಡಿಗೇರ್ ಅವರಿಂದ ಉಪನ್ಯಾಸ.

**ಶ್ರೀ ಶಂಕರ ಮಠ :** ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಮಜ್ಜಗದ್ಗುರು ಶ್ರೀ ಕೂಡಲೀ ಶೃಂಗೇರಿ ಶಂಕರಾಚಾರ್ಯ ಮಹಾಸಂಸ್ಥಾನಂ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 8.30ಕ್ಕೆ ಬ್ರಹ್ಮಚಾರಿಣಿ ಆರಾಧನೆ, ಚಂಡಿಕಾ ಹೋಮ, ಸಂಜೆ 6ಕ್ಕೆ ದುರ್ಗಾದೀಪ ನಮಸ್ಕಾರ, ದೀಪಾರಾಧನೆ ಏರ್ಪಾಡಾಗಿದೆ.



**ವಿದ್ಯಾನಗರ :** ಶ್ರೀ ಈಶ್ವರ - ಪಾರ್ವತಿ - ಗಣಪತಿ ದೇವಸ್ಥಾನದಲ್ಲಿ ದಸರಾ ಮಹೋತ್ಸವ ನಡೆಯುತ್ತಿದ್ದು, ಪ್ರತಿದಿನ ಸಂಜೆ 5 ಗಂಟೆಗೆ ಶ್ರೀ ಈಶ್ವರ-ಪಾರ್ವತಿ-ಗಣಪತಿ ಮಹಿಳಾ ಭಜನಾ ಮಂಡಳಿಯಿಂದ ಲಲಿತ ಸಹಸ್ರನಾಮ ಪಠಣ ನಡೆಯಲಿದೆ.

**ಕನ್ನಿಕಾಪರಮೇಶ್ವರಿ ದೇವಸ್ಥಾನ :** ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ದಸರಾ ಮಹೋತ್ಸವ ಆರಂಭಗೊಂಡಿದ್ದು, ಶ್ರೀ ಅಮ್ಮನವರಿಗೆ ಇಂದು ಬ್ರಹ್ಮಚಾರಿಣಿ ಅಲಂಕಾರ ಮಾಡಲಾಗುತ್ತದೆ. ಸಂಜೆ 7.30ಕ್ಕೆ ಕುಂಕುಮಾರ್ಚನೆ, ಮಂತ್ರ ಪುಷ್ಪ, ಮಹಾಮಂಗಳಾರತಿ ಜರುಗಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ.

**ಶ್ರೀ ಬನಶಂಕರಿ ದೇವಸ್ಥಾನ :** ಹಳೇಬೇತೂರು ರಸ್ತೆಯಲ್ಲಿರುವ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ದಸರಾ ಮಹೋತ್ಸವ ಆರಂಭಗೊಂಡಿದ್ದು, ಪ್ರತಿದಿನ ಶ್ರೀ ದೇವಿಗೆ ಪಂಚಾಮೃತಾಭಿಷೇಕ ಹಾಗೂ ವಿಶೇಷ ಅಲಂಕಾರ ಮಾಡಲಾಗುವುದು. ಪ್ರತಿದಿನ ಸಂಜೆ ಪುರಾಣ ಏರ್ಪಾಡಾಗಿದೆ ಎಂದು ಶ್ರೀ ಬನಶಂಕರಿ ದೇವಿ ದೇವಾಂಗ ಸಮಾಜ ಸಂಘದ ಕಾರ್ಯದರ್ಶಿ ಪ್ರಕಾಶ್ ಎಂ. ಕಮಲಾಪುರ ತಿಳಿಸಿದ್ದಾರೆ.

# ಶ್ರದ್ಧಾ-ಭಕ್ತಿಯಿಂದ ನವರಾತ್ರಿ ಆಚರಣೆ




ದಾವಣಗೆರೆ, ಅ.7 - ನಾಡ ಹಬ್ಬ ನವರಾತ್ರಿಯು ಇಂದಿನಿಂದ ಆರಂಭಗೊಂಡ ಹಿನ್ನೆಲೆಯಲ್ಲಿ ಇಂದು ಪ್ರಥಮ ದಿನವನ್ನು 'ಪ್ರಥಮಂ ಶೈಲಪುತ್ರೀತಿ' ಎಂಬಂತೆ ಶ್ರೀ ದೇವಿ ಶೈಲಪುತ್ರಿಯನ್ನು ಆರಾಧಿಸುವ ಮೂಲಕ ಆಚರಿಸಲಾಗುತ್ತದೆ.

ಈ ದಿನ ಶ್ರೀ ಶೈಲಪುತ್ರಿಯ ಸ್ವರೂಪದಲ್ಲಿ ಶ್ರೀ ದೇವಿಯು ಕಾಣಿಸಿಕೊಂಡಿದ್ದಾಳೆ ಎಂಬ ಪ್ರತೀತಿ ಇದೆ. ಶ್ರೀ ಶೈಲಪುತ್ರಿಯು ಧೈರ್ಯ ಮತ್ತು ಶಕ್ತಿಯ ಸಂಕೇತ. ಶೈಲ ಅಂದರೆ ಪರ್ವತ. ಪುತ್ರಿ ಎಂದರೆ ಮಗಳು. ಪರ್ವತರಾಜನ ಮಗಳು ಪಾರ್ವತಿಯೇ ಶ್ರೀ ಶೈಲಪುತ್ರಿ. ಶ್ರೀ ಶೈಲಪುತ್ರಿಯನ್ನು ಸತಿ ದೇವಿಯ ಪುನರ್ಜನ್ಮವೆಂದೂ ಕರೆಯಲಾಗುತ್ತದೆ. ಈ ದಿನ ಶ್ರೀ ಶೈಲಪುತ್ರಿಯನ್ನು ಆರಾಧಿಸುವುದರಿಂದ ಮಾತೃತ್ವ ಸಿದ್ಧಿಯಾಗುತ್ತದೆ ಎನ್ನುವ ನಂಬಿಕೆಯೂ ಇದೆ. ನಗರದ ಶ್ರೀ ವಿಜಯ ವಿನಾಯಕ ನಾಗರಿಕ ವೇದಿಕೆಯ ಮಹಿಳೆಯರು ನವರಾತ್ರಿಯ ಪ್ರಥಮ ದಿನದಂದು ಸಾಂಪ್ರದಾಯಿಕವಾಗಿ ಹಳದಿ ವರ್ಣದ ಸೀರೆಯನ್ನು ಧರಿಸಿ ಶ್ರೀ ಶೈಲಪುತ್ರಿಯನ್ನು ಆರಾಧಿಸುವ ಮೂಲಕ ಶ್ರದ್ಧಾ ಭಕ್ತಿಯಿಂದ ಆಚರಿಸಿ ಸಂಭ್ರಮಿಸಿದರು.

ಚಿತ್ರದಲ್ಲಿ ನಾಗೇಶ್ವರಿ ರಾಘವೇಂದ್ರ, ನಾಯರಿ, ರಾಧಾ ರೇವಣಸಿದ್ದಪ್ಪ, ಕವಿತಾ ಚಂದ್ರ ನಾಯ್ಕ್, ಮಂಗಳಾ ಪುಟ್ಟರಾಜು, ವಿಜಯಾ ಶ್ರೀನಿವಾಸ್ ನಾಯಕ ಇದ್ದಾರೆ.

# ಸಿ.ಜಿ. ಆಸ್ಪತ್ರೆಯಲ್ಲಿ ಡಯಾಲಿಸಿಸ್‌ಗೆ ಹಣ



## ಸಂಸದ ಸಿದ್ದೇಶ್ವರ ತರಾಟೆ

ದಾವಣಗೆರೆ, ಸೆ. 7 - ಡಯಾಲಿಸಿಸ್‌ಗೆ ಬರುವ ರೋಗಿಗಳು ಹೊರಗಡೆಯಿಂದ ಅಗತ್ಯ ಟ್ಯೂಬ್, ಔಷಧಿ ಹಾಗೂ ಚುಚ್ಚುಮದ್ದುಗಳನ್ನು ತರುವಂತೆ ಜಿಲ್ಲಾ ಸಿ.ಜಿ. ಆಸ್ಪತ್ರೆಯ ವೈದ್ಯರು ತಿಳಿಸುತ್ತಿರುವ ಬಗ್ಗೆ ಸಂಸದ ಜಿ.ಎಂ. ಸಿದ್ದೇಶ್ವರ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಿ.ಜಿ. ಆಸ್ಪತ್ರೆಗೆ ಬಂದಿದ್ದ ಸಂಸದರನ್ನು ಭೇಟಿ ಮಾಡಿದ ರೋಗಿಗಳ ಕುಟುಂಬದವರು, ಡಯಾಲಿಸಿಸ್ ಘಟಕದವರು ಔಷಧಿ ಹಾಗೂ ಚುಚ್ಚುಮದ್ದುಗಳನ್ನು ಹೊರಗಡೆಯಿಂದ ತರುವಂತೆ ಬಾಯಿ ಮಾತಲ್ಲಿ ಹೇಳುತ್ತಾರೆ. ಆಸ್ಪತ್ರೆಯಲ್ಲಿ ಡಯಾಲಿಸಿಸ್ ಉಚಿತ ಎಂದರೂ, ಸಾವಿರದಷ್ಟು ಖರ್ಚಾಗುತ್ತಿದೆ ಎಂದು ಹೇಳಿದರು.

ಕೊರೊನಾದಿಂದ ಕೆಲಸ ಇಲ್ಲದಂತಾಗಿದೆ. ಇಂತಹ ಸಂದರ್ಭದಲ್ಲೇ ಅನಾರೋಗ್ಯ ಸಮಸ್ಯೆ ಕಾಡುತ್ತಿದೆ. ಇಷ್ಟರ ಮೇಲೂ ಹಣ ಖರ್ಚು ಮಾಡುವಂತೆ ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿ ಹೇಳುತ್ತಿದ್ದಾರೆ ಎಂದು ಹಲವಾರು ಮಹಿಳೆಯರು ಕಣ್ಣೀರಿಟ್ಟರು.

ಈ ಬಗ್ಗೆ ಅಸಮಾಧಾನಗೊಂಡ ಸಂಸದರು, ಸಮಸ್ಯೆ ಇವತ್ತಿನದಲ್ಲ, ಹಿಂದಿನಿಂದಲೂ ಇದೆ. ಸುಮಾರು ಬಾರಿ ದೂರು ಬಂದಿವೆ. ಹೀಗಾದರೆ ಸರ್ಕಾರಿ ಆಸ್ಪತ್ರೆ ಇರಬೇಕಾ? ಕೆಲಸ ಮಾಡಲು ಸಾಧ್ಯವಾಗದಿದ್ದರೆ ಮನೆಗೆ ಹೋಗಿ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಡಯಾಲಿಸಿಸ್‌ಗಾಗಿ ಇಂದು ಎಷ್ಟು ಹಣ ಕೊಟ್ಟಿದ್ದೀರಿ ಎಂದು ವಿವರ ಪಡೆದ ಸಂಸದರು, ಅವರಿಗೆ ತಮ್ಮ ಕೈಯಿಂದಲೇ ಆ ಹಣವನ್ನು ಮರು ಪಾವತಿಸಿದರು.

ಅಗತ್ಯ ಔಷಧಿಗಳಿಗೆ ಐದು ನಿಮಿಷಗಳಲ್ಲಿ ಒಪ್ಪಿಗೆ ಸಿಗುತ್ತದೆ. ತ್ವರಿತ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚನೆ ನೀಡಿದರು.

ಹರಿಹರದಲ್ಲೂ ಬಹಳ ದಿನಗಳಿಂದ ಡಯಾಲಿಸಿಸ್ ಯಂತ್ರ ಕೆಟ್ಟಿರುವ ಬಗ್ಗೆ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡ ಬೀಳಗಿ, ತುರ್ತು ಕ್ರಮ ತೆಗೆದುಕೊಳ್ಳುವಂತೆ ಹೇಳಿದರು.

# ಮಕ್ಕಳಲ್ಲಿನ ತೊದಲುವಿಕೆ ನಿವಾರಣೆ ಕುರಿತು ನಾಡಿದ್ದು ಕಾರ್ಯಾಗಾರ

ದಾವಣಗೆರೆ, ಸೆ.7 - ಮಕ್ಕಳ ತೊದಲುವಿಕೆ ನಿವಾರಣೆ ಬಗ್ಗೆ ಲಯನ್ಸ್ ಕ್ಲಬ್ ಹಾಗೂ ಲಯನ್ಸ್ ಕ್ವೆಸ್ಟ್ ಸ್ಪೀಚ್ ಅಂಡ್ ಹೀಯರಿಂಗ್ ಸೆಂಟರ್ ಜಂಟಿ ಆಶ್ರಯದಲ್ಲಿ ಸಿ.ಬಿ.ಆರ್. ಕಾರ್ಯಕ್ರಮದಡಿ ಕಾರ್ಯಾಗಾರ ಸಂಘಟಿಸಲಾಗಿದೆ.

ನಗರದ ಲಯನ್ಸ್ ಭವನದಲ್ಲಿ ಇದೇ ದಿನಾಂಕ 10ರ ಭಾನುವಾರ ಬೆಳಿಗ್ಗೆ 10.30 ರಿಂದ 1.30ರವರೆಗೆ ಹಾಗೂ 2.30 ರಿಂದ 4 ಗಂಟೆವರೆಗೆ ನಡೆಯಲಿರುವ ಈ ಕಾರ್ಯಾಗಾರದಲ್ಲಿ ಮಗುವಿನ ತೊದಲುವಿಕೆಗೆ ಕೆಲ ಚಿಕಿತ್ಸೆಗಳು, ವ್ಯಾಯಾಮಗಳು, ಉಸಿರಾಟದ ವಿಧಗಳು ಹಾಗೂ ಈ ಸಮಸ್ಯೆಯಿಂದ ಹೊರ ಬರಲು ಮನೆಯಲ್ಲಿಯೇ ಅಭ್ಯಾಸ ಮಾಡಬಹುದಾದ ವ್ಯಾಯಾಮಗಳನ್ನು ಪರಿಚಯಿಸಲಾಗುತ್ತದೆ.

ಮಕ್ಕಳಲ್ಲಿ ತೊದಲುವಿಕೆಯು ಸರ್ವೇ ಸಾಮಾನ್ಯವಾಗಿ ಕಂಡು ಬರುತ್ತದೆ. ಇದರಲ್ಲಿ ಶೇ.1ರಷ್ಟು ಪ್ರಯಾದ ವಯಸ್ಸಿನಲ್ಲೂ ಉಳಿಯುತ್ತದೆ. ನರಗಳ ಊತದಿಂದ ಅಥವಾ ಮಾನಸಿಕ ಒತ್ತಡದಿಂದ ತೊದಲುವಿಕೆ ಉಂಟಾಗುತ್ತದೆ.

ತೊದಲುವಿಕೆ ನೈಸರ್ಗಿಕ ಪ್ರಕ್ರಿಯೆ ಎಂದು ಭಾವಿಸಬೇಕಿದೆ. ಈ ಸಮಸ್ಯೆಯಿಂದ ಹೊರ ಬರಲು ವಿಜ್ಞಾನವು ಹಲವಾರು ರೋಗ ನಿವಾರಣೆ ಹಾಗೂ ಚಿಕಿತ್ಸೆಗಳನ್ನು ಸಮಾಜಕ್ಕೆ ಕಾಣಿಕೆಯಾಗಿ ಕೊಟ್ಟಿದೆ. ದಿ.10ರಂದು ನಡೆಯುವ ಕಾರ್ಯಾಗಾರದಲ್ಲಿ ತೊದಲುವಿಕೆ ಸಮಸ್ಯೆಯು ಮಕ್ಕಳಲ್ಲಿ ಕಂಡು ಬಂದಾಗ ಪೋಷಕರ ಕರ್ತವ್ಯವೇನು? ಯಾವುದನ್ನು ಮಾಡಬೇಕು ಹಾಗೂ ಯಾವುದನ್ನು ಮಾಡಬಾರದು ಎಂಬುದರ ಬಗ್ಗೆ ತಿಳಿಸಲಾಗುತ್ತದೆ.

ವಾಕ್ ಮತ್ತು ಶ್ರವಣ ದೋಷ ತಜ್ಞರೂ ಆದ ಎಸ್.ಎಲ್.ಪಿ. ಡಾ. ಸುಬ್ಬರಾಜು (97437 80492) ಅವರು ಕಾರ್ಯಾಗಾರವನ್ನು ನಡೆಸಿಕೊಡಲಿದ್ದಾರೆ ಎಂದು ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ಕಾರ್ಯದರ್ಶಿ ಶಿವಕುಮಾರ್ ಕೋರಿ ತಿಳಿಸಿದ್ದಾರೆ.

# ಬಗೆ ಹರಿದ ಶಿಷ್ಯ ವೇತನ ಸಮಸ್ಯೆ

## ಶಿಷ್ಯವೇತನ ಪಾವತಿಗೆ ಆಡಳಿತ ಮಂಡಳಿ ಸಮ್ಮತಿ

ದಾವಣಗೆರೆ, ಸೆ. 7 - ಜೆ.ಜೆ.ಎಂ.ಸಿ. ವೈದ್ಯಕೀಯ ವಿದ್ಯಾರ್ಥಿ ಗಳ ಶಿಷ್ಯವೇತನದ ಸಮಸ್ಯೆ ಶಾಶ್ವತವಾಗಿ ಬಗೆಹರಿದಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಕಾಲೇಜಿನ ಆಡಳಿತ ಮಂಡಳಿಯಿಂದ ಐದು ತಿಂಗಳಿಂದ ಬರಬೇಕಾದ ಬಾಕಿಗಾಗಿ ವಿದ್ಯಾರ್ಥಿಗಳು ಏಳು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರು. ಇತ್ತೀಚೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಬಾಕಿ ಪಾವತಿಗಾಗಿ ಮನವಿ ಸಲ್ಲಿಸಿದ್ದರು. ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಸಚಿವ ಡಾ. ಸುಧಾಕರ್ ಅವರಿಗೆ ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದ್ದರು. ಈ ಬಗ್ಗೆ ಸುಧಾಕರ್ ಅವರು ಆಡಳಿತ ಮಂಡಳಿ ಜೊತೆಗೆ ಮಾತನಾಡಿದ್ದರು. ನಂತರದಲ್ಲಿ ಸಮಸ್ಯೆ ಬಗೆಹರಿದಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಸಂಸದ ಜಿ.ಎಂ. ಸಿದ್ದೇಶ್ವರ, ಸರ್ಕಾರ ಈ ಹಿಂದೆ ಆಡಳಿತ ಮಂಡಳಿ ಜೊತೆ ನಡೆಸಿ ಸಮಸ್ಯೆ ಬಗೆಹರಿಸಿತ್ತು. ಹಿಂಬಾಕಿಯನ್ನು ಸರ್ಕಾರ ಪಾವತಿಸಲಿದೆ, ಮುಂದಿನ ದಿನಗಳಲ್ಲಿ ನಿಯಮಿತವಾಗಿ ಶಿಷ್ಯವೇತನ ನೀಡಬೇಕು ಎಂದು ತಿಳಿಸಲಾಗಿತ್ತು ಎಂದರು.

ಇಷ್ಟಾದರೂ ಐದು ತಿಂಗಳ ಬಾಕಿ ಉಳಿಸಿಕೊಂಡಿರುವುದು ತಪ್ಪು. ಸರ್ಕಾರಿ ಆಸ್ಪತ್ರೆ ಬಳಸಿಕೊಂಡ ನಂತರ ಬಾಕಿ ಉಳಿಸಿಕೊಳ್ಳಬಾರದು ಎಂದು ತಿಳಿಸಿದ್ದಾರೆ.

ಇನ್ನು ಮುಂದಿನ ದಿನಗಳಲ್ಲಿ ಆಡಳಿತ ಮಂಡಳಿಯೇ ಶಿಷ್ಯವೇತನವನ್ನು ಪಾವತಿಸಲು ಒಪ್ಪಿಕೊಂಡಿದೆ ಎಂದು ವಿದ್ಯಾರ್ಥಿಗಳೂ ಹೇಳಿದ್ದಾರೆ.

# ಆರ್‌ಎಸ್‌ಎಸ್ ಏನೂ ಎಕೆ - 47 ಹಿಡಿದಿಲ್ಲ ಲಾಠಿ ಹಿಡಿದಿರುವುದು ಶಿಸ್ತಿಗಾಗಿ ಮಾತ್ರ

**ಸಂಘ ಪರಿವಾರಕ್ಕೆ ಸೇರಿದವರು ಐಎಎಸ್‌ಗೆ ಸೇರ್ಪಡೆಯಾಗಿದ್ದಾರೆ ಎಂದು ಕುಮಾರಸ್ವಾಮಿ ಹೇಳಿರುವುದಕ್ಕೆ ಸಂಸದ ಸಿದ್ದೇಶ್ವರ ಆಕ್ಷೇಪ**

ದಾವಣಗೆರೆ, ಅ. 7 - ಸಂಘ ಪರಿವಾರದವರು ಎಂಬ ಕಾರಣಕ್ಕಾಗಿ ಐಎಎಸ್ ಅಧಿಕಾರಿ ಆಗಬಾರದು ಎಂಬ ನಿರ್ಬಂಧ ಹೇರಲು ಸಾಧ್ಯವಿಲ್ಲ ಎಂದಿರುವ ಸಂಸದ ಜಿ.ಎಂ.ಸಿದ್ದೇಶ್ವರ, ಸಂಘದವರು ಎಂಬ ಕಾರಣಕ್ಕೆ ಯಾರಿಗೂ ಅಂಕ ಕೊಟ್ಟು ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸಿಲ್ಲ ಎಂದಿದ್ದಾರೆ.

ಸಂಘ ಪರಿವಾರದ ನಾಲ್ಕೈದು ಸಾವಿರ ಜನ ಐಎಎಸ್ ಅಧಿಕಾರಿಗಳಾಗಿದ್ದಾರೆ ಎಂದು ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಹೇಳಿರುವ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ಸಂಸದರು, ಆರ್‌ಎಸ್‌ಎಸ್‌ನವರು ಎಂಬ ಕಾರಣಕ್ಕೆ ಯಾರಿಗೂ ಅಂಕ ಕೊಟ್ಟಿಲ್ಲ. ಚೆನ್ನಾಗಿ ಓದಿದ ಯಾರು ಬೇಕಾದರೂ ಅಧಿಕಾರಿ ಆಗಬಹುದು ಎಂದು ಹೇಳಿದರು.

ಆರ್‌ಎಸ್‌ಎಸ್ ಸೇವಾ ಸಂಸ್ಥೆಯಾಗಿದೆ. ಅಲ್ಲಿ ಸೇರಿದವರಿಗೆ ಮಾತ್ರ ಸಂಘದ ಬಗ್ಗೆ ತಿಳಿದಿರುತ್ತದೆ. ದೇಶದ ಉತ್ಕೃಷ್ಟತೆ, ಸಹಬಾಳ್ವೆಗೆ ಆರ್‌ಎಸ್‌ಎಸ್ ಶ್ರಮಿಸುತ್ತಿದೆ ಎಂದು ಸಂಸದರು ಹೇಳಿದ್ದಾರೆ.

ಆರ್‌ಎಸ್‌ಎಸ್ ಏನೂ ತಾಲಿಬಾನ್ ಅಲ್ಲ, ಎಕೆ - 47 ಹಿಡಿದಿಲ್ಲ. ಎಲ್ಲಿಯೂ ಬಾಂಬ್ ಸ್ಫೋಟ ಮಾಡಿಲ್ಲ. ಶಿಸ್ತಿಗಾಗಿ ಮಾತ್ರ ಲಾಠಿ ಹಿಡಿಯುತ್ತಾರೆ. ವಿಕೋಪ ಹಾಗೂ ಯುದ್ಧದ ಸಂದರ್ಭಗಳಲ್ಲಿ ಆರ್‌ಎಸ್‌ಎಸ್ ಸೇವೆ ಸಲ್ಲಿಸುತ್ತಾ ಬಂದಿದೆ ಎಂದು ಸಿದ್ದೇಶ್ವರ ಹೇಳಿದ್ದಾರೆ.


# ಆನ್‌ಲೈನ್‌ನಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ

ದಾವಣಗೆರೆ, ಅ.5- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪ್ರವೇಶಾತಿ ಪಡೆದ ಪ್ರಥಮ ವರ್ಷದ ಸ್ನಾತಕ ಮತ್ತು ಸ್ನಾತಕೋತ್ತರ (ಬಿಎ, ಬಿಕಾಂ, ಬಿ.ಲಿಬ್.ಐ.ಎಸ್‌ಸಿ, ಎಂ.ಎ., ಎಂ.ಕಾಂ., ಎಂ.ಎಸ್‌ಸಿ, ಎಂಬಿಎ, ಎಂ.ಲಿಬ್.ಐ.ಎಸ್‌ಸಿ, ಬಿಇಡಿ) ಮತ್ತು ದ್ವಿತೀಯ ವರ್ಷದ ಸ್ನಾತಕ ಬಿಎ, ಬಿಕಾಂ, ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದ ತರಗತಿಗಳನ್ನು ಆನ್‌ಲೈನ್ ಮುಖಾಂತರ ಇದೇ ದಿನಾಂಕ 8 ರಿಂದ ನಡೆಸಲಾಗುತ್ತಿದೆ.

ಕೌಶಲ್ಯಾಭಿವೃದ್ಧಿ ತರಬೇತಿಯ ಪಠ್ಯ ವಿಷಯ, ವೇಳಾಪಟ್ಟಿ ಮತ್ತು ತರಗತಿಗಳ ಆನ್‌ಲೈನ್ ವೆಬ್‌ಲಿಂಕ್‌ಗಳನ್ನು ಮುಕ್ತ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಯೋಜನಾಧಿಕಾರಿ ಲೋಕೇಶ್ ಜಿ.ಎಸ್. (9611434810) ಇವರನ್ನು ಸಂಪರ್ಕಿಸಬಹುದು.

# ಶ್ಯಾಗಲೆ ಗ್ರಾಮದಲ್ಲಿ ಗುರು ಕರಿಸಿದ್ದೇಶ್ವರ ಸ್ವಾಮಿಗಳ 66ನೇ ಪುಣ್ಯಾರಾಧನೆ



ದಾವಣಗೆರೆ, ಅ.7- ತಾಲ್ಲೂಕಿನ ಶ್ಯಾಗಲೆ ಗ್ರಾಮದ ಶ್ರೀ ಗುರು ಕರಿಸಿದ್ದೇಶ್ವರ ಸ್ವಾಮಿಗಳ 66ನೇ ಪುಣ್ಯಾರಾಧನೆ ಇಂದು ನಡೆಯಿತು.

ಪುಣ್ಯಾರಾಧನೆ ಅಂಗವಾಗಿ ಧ್ವಜಾರೋಹಣ, ಶ್ರೀ ಗುರು ಕರಿಸಿದ್ದೇಶ್ವರ ಸ್ವಾಮಿಗಳ ಕರ್ತೃ ಗದ್ದಿಗೆಗೆ ರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು.

# ಸಂಜಯ್‌ಗೆ ಬಂಗಾರ-ಬೆಳ್ಳಿ ಪದಕ




ದಾವಣಗೆರೆ, ಅ.7- ನಗರದ ಸೈನ್ಸ್ ಅಕಾಡೆಮಿ ಪದವಿ ಪೂರ್ವ ಕಾಲೇಜ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿ ಜಿ.ಸಿ. ಸಂಜಯ್ ರಾಜಸ್ಥಾನದ ಉದಯ್‌ಪುರ್‌ನಲ್ಲಿ ನಡೆದ ನ್ಯಾಷನಲ್ ಜಂಪ್ ರೋಪ್ ಚಾಂಪಿಯನ್ ಶಿಪ್‌ನಲ್ಲಿ ವೈಯಕ್ತಿಕ ಹಾಗೂ ತಂಡದ ವಿಭಾಗಗಳಲ್ಲಿ ಬಂಗಾರ ಮತ್ತು ಬೆಳ್ಳಿ ಪದಕಗಳನ್ನು ಪಡೆದು ನೂತನ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಯನ್ನು ಗಾಂಧೀ ಜಯಂತಿ ಸಂದರ್ಭದಲ್ಲಿ ಕಾಲೇಜು ವತಿಯಿಂದ ಸನ್ಮಾನಿಸಿ, ಅಭಿನಂದಿಸಲಾಯಿತು. ಕಾಲೇಜು ಕಾರ್ಯದರ್ಶಿ ವೈ.ವಿ. ವಿನಯ್, ಪ್ರಾಂಶುಪಾಲ ಜಿ. ವಿರೂಪಾಕ್ಷಪ್ಪ ವಿದ್ಯಾರ್ಥಿಯ ಸಾಧನೆಯನ್ನು ಶ್ಲಾಘಿಸಿದರು.

ಸಂಸ್ಥೆಯ ಅಧ್ಯಕ್ಷ ಎ.ಹೆಚ್. ಶಶಿಕಿರಣ್, ಉಪಾಧ್ಯಕ್ಷ ಕೆ. ರಘು, ಸಂಸ್ಥೆಯ ನಿರ್ದೇಶಕರು, ಪಾಲಿಕೆ ಮೇಯರ್ ಕೂಡ ಆಗಿರುವ ಎಸ್.ಟಿ. ವೀರೇಶ್ ಮತ್ತು ಇತರರು ಹಾಜರಿದ್ದರು.

# ಪ್ರಿಯಾಂಕ ಗಾಂಧಿ ಬಂಧನ ಖಂಡಿಸಿ ಮಾಯಕೊಂಡ ಬ್ಲಾಕ್ ಕಾಂಗ್ರೆಸ್‌ನಿಂದ ಪ್ರತಿಭಟನೆ



ದಾವಣಗೆರೆ, ಅ.7- ಉತ್ತರ ಪ್ರದೇಶದ ಲಖೀಂಪುರದಲ್ಲಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಬೆಂಗಾವಲು ಕಾರು ಹರಿಸಿ ನಾಲ್ವರು ರೈತರನ್ನು ಹತ್ಯೆ ಮಾಡಿದ್ದನ್ನು ಹಾಗೂ ಹತ್ಯೆಯಾದ ಕುಟುಂಬದವರಿಗೆ ಸಾಂತ್ವನ ಹೇಳಲು ತೆರಳುತ್ತಿದ್ದ ಉತ್ತರ ಪ್ರದೇಶ ಕಾಂಗ್ರೆಸ್ ಉಸ್ತುವಾರಿ ಪ್ರಿಯಾಂಕ ಗಾಂಧಿಯವರನ್ನು ಪೊಲೀಸರು ದೌರ್ಜನ್ಯದಿಂದ ಗೃಹ ಬಂಧನದಲ್ಲಿಟ್ಟಿದ್ದ ಕ್ರಮವನ್ನು ಖಂಡಿಸಿ, ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ವತಿಯಿಂದ ಅಣಜಿ ಗ್ರಾಮದಲ್ಲಿ ಇಂದು ಪ್ರತಿಭಟನೆ ನಡೆಸಿ, ಉಚ್ಚಂಗಿದುರ್ಗ ಕ್ರಾಸ್ ಸರ್ಕಲ್‌ನಲ್ಲಿ ರಸ್ತೆ ತಡೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿ.ಪಂ. ಸದಸ್ಯ ಕೆ.ಎಸ್. ಬಸವಂತಪ್ಪ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತಿರುವುದನ್ನು ಖಂಡಿಸಿ, ರೈತರಿಗೆ ಮರಣ ಶಾಸನವಾಗಿರುವ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಜಿಲ್ಲಾ ವೀಕ್ಷಕ ಹಾಗೂ ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್ ಮಾತನಾಡಿ, ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ಹೋರಾಟ ಮಾಡುವವರ ಕಗ್ಗೊಲೆ ಮಾಡುತ್ತಿದ್ದು, ತನ್ನ ವಿರುದ್ಧ ಧ್ವನಿ ಎತ್ತುತ್ತಿರುವ ರೈತರ ಉಸಿರನ್ನೇ ನಿಲ್ಲಿಸುವ ಪ್ರಯತ್ನ ಮಾಡಿದೆ ಎಂದು ಆರೋಪಿಸಿದರು.

ಎಪಿಎಂಸಿ ಅಧ್ಯಕ್ಷರಾದ ಎಸ್.ಕೆ. ಚಂದ್ರಶೇಖರ್ ಮಾತನಾಡಿದರು. ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಶಂಭುಲಿಂಗಪ್ಪ, ಹೆಮ್ಮನಬೇತೂರು ತಿಪ್ಪೇಶ್, ಪ್ರಕಾಶ್, ಕಂದನಕೋವಿ ಕೆಂಚವೀರಪ್ಪ, ಅಣಜಿ ಪ್ರಕಾಶ್ ಪಾಟೀಲ್, ಅಣಜಿ ಹೊನ್ನಪ್ಪ, ಬಸವಲಿಂಗಪ್ಪ, ಅಂಜಿನಪ್ಪ, ರಾಜಪ್ಪ, ಅಸಂಘಟಿತ ಕಾರ್ಮಿಕರ ಸಂಘದ ಅಧ್ಯಕ್ಷ ಮೆಳ್ಳೇಕಟ್ಟೆ ಹನುಮಂತಪ್ಪ, ಕಿಸಾನ್ ಮೋರ್ಚಾ ಅಧ್ಯಕ್ಷ ಹಾಲೇಶ್, ಗ್ರಾಮ ಪಂಚಾಯಿತಿ ಸದಸ್ಯ ಬಸವರಾಜಪ್ಪ, ಅಣಜಿ ಸಹಕಾರ ಸಂಘದ ಅಧ್ಯಕ್ಷ ಸಂತೋಷ್ ಮತ್ತು ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಸೇವೆಗೆ ಶ್ಲಾಘನೆ



ದಾವಣಗೆರೆ,ಅ.7 - 'ಮನೆ ಬಾಗಿಲಿಗೆ ನಿಮ್ಮ ಸೇವಕ' ಧ್ಯೇಯ ವಾಕ್ಯದೊಂದಿಗೆ 38ನೇ ವಾರ್ಡಿನ ನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಅವರ ಸಾರ್ವಜನಿಕರ ಸೇವೆಯನ್ನು ಶ್ಲಾಘಿಸಿ ಆ ಭಾಗದ ಹೆಚ್.ಎಂ. ವಿಶ್ವನಾಥ್, ಎಂ.ಕೆ. ಬಕ್ಕಪ್ಪ, ಮಲ್ಲಿಕಾರ್ಜುನ ಕಣವಿ, ಟಿ.ಎಂ. ಬಸವರಾಜಯ್ಯ ಮತ್ತಿತರರು ಅಭಿನಂದಿಸಿದರು.

# 10ಕ್ಕೆ 'ಕ್ಯಾನ್ಸರ್ ನಡೆ-2021' ಅಭಿಯಾನ

ದಾವಣಗೆರೆ, ಅ.7- ದಾವಣಗೆರೆ ಕ್ಯಾನ್ಸರ್ ಫೌಂಡೇಶನ್ ಜನ ಜಾಗೃತಿಗಾಗಿ 'ಕ್ಯಾನ್ಸರ್ ನಡೆ - 2021' ಅಭಿಯಾನವನ್ನು ಇದೇ ದಿನಾಂಕ 10ರ ಭಾನುವಾರ ಬೆಳಿಗ್ಗೆ 8 ರಿಂದ 9 ರವರೆಗೆ ನಗರದ ಟಿ.ವಿ. ಸ್ಟೇಷನ್ ವಿಮಾನ ಮಟ್ಟಿಯಲ್ಲಿ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಟ್ರಸ್ಟಿ ಡಾ. ಎ.ಎಂ. ಶಿವಕುಮಾರ್, ಕಾರ್ಯದರ್ಶಿ ಡಾ. ಸುನೀಲ್ ಬ್ಯಾಡಗಿ ತಿಳಿಸಿದ್ದಾರೆ.

ಗ್ರೇಸ್ ಫೌಂಡೇಶನ್ ಹೈದರಾಬಾದ್, ದಾವಣಗೆರೆಯ ರೆಡ್ ಕ್ರಾಸ್ ಸಂಸ್ಥೆ, ಐ.ಎಂ.ಎ ದಾವಣಗೆರೆ, ಲೈಫ್ ಲೈನ್, ದಾವಣಗೆರೆ ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಗೆಳೆಯರು ಪ್ರತಿಷ್ಠಾನ, ಭಾರತೀಯ ವಿಕಾಸ ಪರಿಷತ್, ದಾವಣಗೆರೆ ವರದಿಗಾರರ ಕೂಟ ಇವರ ಸಹಯೋಗದೊಂದಿಗೆ ಈ ಅಭಿಯಾನ ಏರ್ಪಾಡಾಗಿದೆ. ಪರೋಕ್ಷ ನಡೆಯಲ್ಲಿ ಭಾಗವಹಿಸುವವರು ತಾವು ಇರುವ ಸ್ಥಳದಲ್ಲಿ ನಡಿಗೆ ಮಾಡಿ ಅದರ 30 ಸೆಕೆಂಡ್ ಸೆಲ್ಫೀ ವಿಡಿಯೋವನ್ನು ದಾವಣಗೆರೆ ಕ್ಯಾನ್ಸರ್ ಫೌಂಡೇಶನ್ ಫೇಸ್ ಬುಕ್ ಪೇಜ್‌ಗೆ ಲಗತ್ತಿಸಲು ಫೌಂಡೇಶನ್ ರಾಯಭಾರಿ ಅರುಣ್ ಕುಮಾರ್ ಆರ್.ಟಿ. ಮನವಿ ಮಾಡಿದ್ದಾರೆ.

# ಐಟಿಐನಲ್ಲಿ ಹೊಸ ಕೋರ್ಸ್ ಆರಂಭ

ದಾವಣಗೆರೆ, ಅ.7- ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಟಾಟಾ ಟೆಕ್ನಾಲಜಿ ಸಹಯೋಗದಲ್ಲಿ ಎರಡು ಹೊಸ ವೃತ್ತಿಗಳಾದ ಅಡ್ವಾನ್ಸ್‌ಡ್ ಮ್ಯಾನುಫ್ಯಾಕ್ಚರಿಂಗ್ (ಎಸ್‌ಸಿವಿಟಿ) ಮತ್ತು ಬ್ಯಾಟರಿ ಎಲೆಕ್ಟ್ರಿಕ್ ವೆಹಿಕಲ್ಸ್ (ಎಸ್‌ಸಿವಿಟಿ) ಗಳನ್ನು ಆರಂಭಿಸಲಾಗಿದೆ.

ಇಂದಿನಿಂದ ಇದೇ ದಿನಾಂಕ 20 ರವರೆಗೆ ಪ್ರವೇಶಕ್ಕಾಗಿ ಅರ್ಜಿಯನ್ನು ವಿತರಿಸಲಾಗುವುದು. ಆಸಕ್ತ ಅಭ್ಯರ್ಥಿಗಳು ಅರ್ಜಿಗಳಿಗಾಗಿ ಐಟಿಐ ಕಾಲೇಜಿನಲ್ಲಿ ಸಂಪರ್ಕಿಸುವಂತೆ ಪ್ರಾಂಶುಪಾಲರು ತಿಳಿಸಿದ್ದಾರೆ.

# ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಅ.7 - ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪ್ರಸಕ್ತ ಸಾಲಿನಲ್ಲಿ ಬಾಲಕರಿಗಾಗಿ ಹೊಯ್ಸಳ ಮತ್ತು ಬಾಲಕಿಯರಿಗಾಗಿ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಯನ್ನು ಮಕ್ಕಳ ದಿನಾಚರಣೆಯಂದು ಪ್ರದಾನ ಮಾಡಲು ಉದ್ದೇಶಿಸಿದ್ದು ಧೈರ್ಯ, ಸಾಹಸ ಪ್ರದರ್ಶಿಸಿದ 5 ರಿಂದ 18 ವರ್ಷದೊಳಗಿನ ಮಕ್ಕಳಿಂದ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇಚ್ಛಿಸುವವರು ವಿವರಗಳೊಂದಿಗೆ ಅರ್ಜಿಯನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 14ನೇ ಮುಖ್ಯರಸ್ತೆ, ಎಂಸಿಸಿ 'ಬಿ' ಬ್ಲಾಕ್, ಕುವೆಂಪು ನಗರ, ದಾವಣಗೆರೆ-4 ಇವರಿಗೆ ಇದೇ ದಿನಾಂಕ 16 ರೊಳಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸುವ ದೂರವಾಣಿ 08192-264056.

# ಜಿಲ್ಲೆಯಲ್ಲಿ 2 ಪಾಸಿಟಿವ್, 1 ಗುಣಮುಖ

ದಾವಣಗೆರೆ, ಅ.7- ಜಿಲ್ಲೆಯಲ್ಲಿ ಇಬ್ಬರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಒಬ್ಬರು ಗುಣಮುಖ ರಾದ ಬಗ್ಗೆ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಿದೆ. ಜಿಲ್ಲೆಯಲ್ಲಿ ಪ್ರಸ್ತುತ 40 ಸಕ್ರಿಯ ಪ್ರಕರಣಗಳಿವೆ.

# ಸಿ.ಜಿ. ಆಸ್ಪತ್ರೆಯಲ್ಲಿ ಪೆಟ್ರೋನೆಟ್ ಆಕ್ಸಿಜನ್ ಘಟಕಗಳ ಉದ್ಘಾಟನೆ

ದಾವಣಗೆರೆ, ಸೆ. 7 - ನಗರದ ಸಿ.ಜಿ. ಆಸ್ಪತ್ರೆಯಲ್ಲಿ ಪಿಎಂ - ಕೇರ್ಸ್ ನಿಧಿಯಿಂದ ಸ್ಥಾಪಿಸಲಾಗಿರುವ 2,000 ಲೀಟರ್ ಸಾಮರ್ಥ್ಯದ ಹಾಗೂ ಸರ್ಕಾರಿ ಸ್ವಾಮ್ಯದ ಪೆಟ್ರೋನೆಟ್ ಮೂಲಕ ಸ್ಥಾಪಿಸಲಾಗಿರುವ 1,000 ಲೀಟರ್ ಸಾಮರ್ಥ್ಯದ ಆಕ್ಸಿಜನ್ ಘಟಕಗಳನ್ನು ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸಿದ್ದಾರೆ.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೊರೊನಾ ಬಂದ ಸಂದರ್ಭಕ್ಕೆ ಹೋಲಿಸಿದರೆ ಈಗ ದೇಶದಲ್ಲಿ ಆಕ್ಸಿಜನ್ ಉತ್ಪಾದನಾ ಸಾಮರ್ಥ್ಯ ಹಲವು ಪಟ್ಟು ಹೆಚ್ಚಾಗಿದೆ. ದೇಶದ ಪ್ರತಿ ಜಿಲ್ಲೆಯಲ್ಲೂ ಆಕ್ಸಿಜನ್ ಉತ್ಪಾದನಾ ಘಟಕಗಳಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು. ಮೂರು ಘಟಕಗಳಿಂದ ಪ್ರತಿ ನಿಮಿಷಕ್ಕೆ ಒಟ್ಟು 3 ಸಾವಿರ ಲೀಟರ್ ಆಕ್ಸಿಜನ್ ಲಭ್ಯವಾಗಲಿದೆ ಎಂದರು.



ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜನರ ಜೀವ ಉಳಿಸಲು ಆಕ್ಸಿಜನ್ ಉತ್ಪಾದನಾ ಘಟಕಗಳ ಸ್ಥಾಪನೆಗೆ ಕ್ರಮ ತೆಗೆದುಕೊಂಡಿದ್ದಾರೆ ಎಂದವರು ಹೇಳಿದರು.

ಸಿ.ಜಿ. ಆಸ್ಪತ್ರೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಖಾಸಗಿ ಸಹಭಾಗಿತ್ವದಲ್ಲಿ ಕಾಲೇಜು ಸ್ಥಾಪಿಸಲು ಈಗಾಗಲೇ ನಿರ್ಧರಿಸಲಾಗಿದೆ. ಇದಕ್ಕೆ ಕೆಲ ತಾಂತ್ರಿಕ ತೊಡಕುಗಳಿದ್ದು, ಅವುಗಳನ್ನು ಬಗೆಹರಿಸಲಾಗುವುದು. ನಂತರ ಟೆಂಡರ್ ಕರೆದು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಪ್ರೊ. ಲಿಂಗಣ್ಣ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್‌ಪಿ ಸಿ.ಬಿ. ರಿಷ್ಯಂತ್, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಡಿ.ಹೆಚ್.ಓ. ಡಾ. ನಾಗರಾಜ್, ಡಿಸ್ಟ್ರಿಕ್ಟ್ ಸರ್ಜನ್ ಡಾ. ಜಯಪ್ರಕಾಶ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರುಗಳಾದ ತ್ಯಾವಣಗಿ ವೀರಭದ್ರಸ್ವಾಮಿ, ಜಯಣ್ಣ ಪದ್ಮನಾಭ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

**ಶರತ್ ಋತುವಿನ ವಿಶೇಷ ಚಿಕಿತ್ಸಾ ಶಿಬಿರ**

ಅಶ್ವಯುಜ-ಕಾರ್ತಿಕ ಮಾಸದವರೆಗೆ (ಸೆಪ್ಟೆಂಬರ್ ಮಧ್ಯದಿಂದ-ಡಿಸೆಂಬರ್ ಮಧ್ಯ) ಬರುವಂತಹ ಕಾಲಕ್ಕೆ ಶರದ್‌ಋತು ಆಗಮಿಸುತ್ತದೆ. ಈ ಕಾಲದಲ್ಲಿ ಪಿತ್ತ-ರಕ್ತದಿಂದ ಆಗುವಂತಹ ತೊಂದರೆಗಳಾದ ಬಾಯಿ ಹುಣ್ಣು, ಕುರುಗಡ್ಡೆ, ತಲೆನೋವು, ಮುಟ್ಟಿನ ಸಮಸ್ಯೆ ಮತ್ತು ಇನ್ನೂ ಅನೇಕ ಚರ್ಮ ವ್ಯಾಧಿಗಳು ಈ ಕಾಲದಲ್ಲಿ ಅಧಿಕವಾಗಿ ಕಂಡುಬರುತ್ತವೆ. ಈ ರೋಗಗಳಿಗೆ ಶರದ್ ಋತುವಿನಲ್ಲಿ ಚಿಕಿತ್ಸೆ ಪಡೆದರೆ ವಿಶೇಷ ಲಾಭ ಲಭಿಸುತ್ತದೆ. ಇದರ ಅನ್ವಯ ಈ ಋತುವಿನಲ್ಲಿ ಅನುಸರಿಸಬೇಕಾದ ನಿಯಮಗಳು ಮತ್ತು ಚಿಕಿತ್ಸೆಗಳನ್ನು ತಿಳಿದುಕೊಳ್ಳಲು ಇಂದೇ ಸಂಪರ್ಕಿಸಿರಿ

ANVAYA
**ಅನ್ವಯ ಆಯುರ್ವೇದ ಆಸ್ಪತ್ರೆ**

#1981, 10ನೇ ಕ್ರಾಸ್, ಆಶ್ರಯ ಆಸ್ಪತ್ರೆ ಹಿಂಭಾಗ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
☎ 08192-252228, 8618642929, www.anvayayurveda.com

ಈ ಚೀಟಿಯನ್ನು ತಂದವರಿಗೆ ಶೇಕಡ 10% ರಿಯಾಯಿತಿ ದೊರೆಯುತ್ತದೆ

# ಶಾಂತಿವನ ಜಲಾಶಯಕ್ಕೆ ತರಳಬಾಳು ಜಗದ್ಗುರುಗಳಿಂದ ಬಾಗಿನ



ಸಿರಿಗೆರೆ, ಅ.7 - ಹತ್ತು ವರ್ಷಗಳಿಂದ ತುಂಬದ ಶಾಂತಿ ವನದ ಜಲಾಶಯ ಈಗ ವರುಣನ ಕೃಪೆಯಿಂದ ತುಂಬಿ ಹರಿಯುವ ಭಾಗ್ಯ ದೊರೆತಿರುವುದು ಸಂತಸದ ಸಂಗತಿ ಎಂದು ತರಳಬಾಳು ಬೃಹನ್ಮಠದ ಜಗದ್ಗುರು ಡಾ.ಶಿವ ಮೂರ್ತಿ ಶಿವಾಚಾರ್ಯ ಸ್ವಾಮೀಜಿ ಎಂದು ಹೇಳಿದರು.

ಜಲಾಶಯಕ್ಕೆ ಸುತ್ತ ಮುತ್ತಲಿನ ಗ್ರಾಮಸ್ಥರೊಂದಿಗೆ ಬಾಗಿನ ಅರ್ಪಿಸಿ ಶ್ರೀಗಳು ಮಾತನಾಡುತ್ತಾ, ಮನುಷ್ಯನ ಮೂಲಭೂತ ಅವಶ್ಯಕತೆಯೇ ನೀರು. ಈ ತರಹದ ಯೋಜನೆಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಆಗಬೇಕು. ಆಗ ಬಹುತೇಕ ರೈತರ ಸಮಸ್ಯೆಗಳು ನಿವಾರಣೆಯಾಗುತ್ತವೆ. ಜಲಾಶಯ ತುಂಬಿ ಹರಿದಿದ್ದು ನಮಗಿಂತ ಹೆಚ್ಚಾಗಿ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಸಂತೋಷವಾಗಿದೆ ಎಂದರು.

ಬುಧವಾರ ರಾತ್ರಿಯಿಂದಲೂ ಸುರಿದ ಮಳೆ ಗಾದ್ರಿಗುಡ್ಡ, ಮೆದಿಕೇರಿಪುರ ಗುಡ್ಡ, ಪಳಿಕೇಹಳ್ಳಿ ಗುಡ್ಡಗಳಿಗೆ ಹೆಚ್ಚು ಮಳೆಯಾಗಿರುವುದರಿಂದ ಜಲಾಶಯಕ್ಕೆ ನೀರು ಬರುವುದು ಖಚಿತವಾಗಿತ್ತು. ನೀರು ಮೂರು-ನಾಲ್ಕು ಹಳ್ಳಿಗಳ ಹಳ್ಳಗಳನ್ನು ದಾಟಿಬರುವ ಹೊತ್ತಿಗೆ ಜಲಾಶಯಕ್ಕೆ ನೀರು ಬರುತ್ತಿರಲಿಲ್ಲ. ಪ್ರಸ್ತುತ ವರ್ಷದಲ್ಲಿ ಮಳೆಯರಾಯ ಮಳೆ ಸುರಿಸಿ ಜಲಾಶಯ ತುಂಬಿ ಸುತ್ತಮುತ್ತಲಿನ ಗ್ರಾಮಗಳ ರೈತರಿಗೆ ವರದಾನವಾಗಿದೆ. ಈ ಸಂತಸದ ಕ್ಷಣವನ್ನು ನೋಡಿ ಆನಂದಿಸಲು ಸುತ್ತಮುತ್ತಲಿನ ಭಾಗದ ರೈತರಿಗೆ ಮತ್ತು ಮಹಿಳೆಯರಿಗೆ ಗುರುವಾರ ಭೇಟಿ ಮಾಡಲು ತಿಳಿಸಿ, ಬಾಗಿನ ಅರ್ಪಿಸಲಾಯಿತು.

ಶಾಂತಿವನದ ಜಲಾಶಯ 2011 ರಲ್ಲಿ ಸಂಪೂರ್ಣ ತುಂಬಿತ್ತು, ಇತ್ತೀಚಿನ ದಿನಗಳಲ್ಲಿ ಹೆಚ್ಚು ನೀರು ಸಂಗ್ರಹವಾಗಲೆಂದು ಈ ಡ್ಯಾಂ ಆಳ ಪಡಿಸಲಾಗಿತ್ತು. ಹತ್ತು ವರ್ಷಗಳ ನಂತರ ಡ್ಯಾಮ್ ಸಮೃದ್ಧವಾಗಿ ತುಂಬಿರುವುದು ಈ ಭಾಗದ ರೈತರ ಬವಣೆ ತೀರಿದಂತಾಗಿದೆ, ಇನ್ನು 3 ವರ್ಷಗಳ ಕಾಲ ಅಂತರ್ಜಲ ಮಟ್ಟ ಸ್ಥಿರವಾಗಿರುತ್ತದೆ. ಹಳೇರಂಗಾಪುರ, ಸೀಗೇಹಳ್ಳಿ, ಹಳವುದರ, ಹಂಪನೂರು, ಲಿಂಗವ್ವನಾಗ್ತಿಹಳ್ಳಿ, ಅಳಗವಾಡಿ, ಅರಬಗಟ್ಟೆ, ಹೆಗ್ಗೆರೆ, ಕೊಳಹಾಳು ಗ್ರಾಮಗಳಿಗೆ ಅಂತರ್ಜಲ ಹೆಚ್ಚಾಗಿ ಬೋರ್‌ನಲ್ಲಿ ನೀರು ಹೆಚ್ಚು ಬರಲಿದೆ ಎಂದು ಅಂತರ್ಜಲ ತಜ್ಞರು ತಿಳಿಸಿದ್ದಾರೆ.

ಸಿರಿಗೆರೆಯ ಶ್ರೀಮಠದ ವತಿಯಿಂದ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ 'ಶಾಂತಿವನ ಜಲಾಶಯ' ವನ್ನು 2003 ರಲ್ಲಿ ನಿರ್ಮಿಸಿದ್ದು, ಈ ಡ್ಯಾಮ್ ಸುಮಾರು 2ಕಿ.ಮೀ. ನಷ್ಟು ಉದ್ದವಾಗಿದ್ದು, 37 ಅಡಿ ಆಳ ಹೊಂದಿದೆ. ಸಿರಿಗೆರೆ ಸುತ್ತಮುತ್ತಲಿನ ರೈತರಿಗೆ ಅನುಕೂಲ ಮಾಡಿಕೊಡುವ ಮಹೋನ್ನತ ಉದ್ದೇಶದಿಂದ ಸುಮಾರು 15 ಗ್ರಾಮಗಳ ರೈತರಿಗೆ, ಪಶು, ಪ್ರಾಣಿ-ಪಕ್ಷಿಗಳಿಗೆ ಯೋಜನೆ ತುಂಬಾ ಅನುಕೂಲಕರವಾಗಿದೆ.

ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಎಸ್.ಬಿ.ರಂಗನಾಥ್, ವಿಶೇಷಾಧಿಕಾರಿ ಡಾ. ಹೆಚ್.ವಿ. ವಾಮದೇವಪ್ಪ ಮತ್ತಿತರರ ಉಪಸ್ಥಿತರಿದ್ದರು.



## ಮಳೆ : ತುಂಬಿದ ಐತಿಹಾಸಿಕ ಪುಷ್ಕರಣಿ

ಸಂತೇಬೆನ್ನೂರಿನ ಇತಿಹಾಸಿಕ ಪುಷ್ಕರಣಿ ಮಳೆಗೆ ಸಂಪೂರ್ಣವಾಗಿ ತುಂಬಿರುವ ದೃಶ್ಯ. ಇನ್ನು ಕೇವಲ ನಾಲ್ಕು ಮೆಟ್ಟಿಲು ಮಳೆಯ ನೀರು ಬಂದರೆ ತುಂಬಿದ ಪುಷ್ಕರಣಿಯಿಂದ ಪಕ್ಕದಲ್ಲಿಯೇ ಇರುವ ಗುಂಡಿಗೆ, ತುಂಬಿದ ನೀರು ಹೊರಹೋಗಲು ಒಳ ಮಾರ್ಗವಿದ್ದು, ಆ ಮಾರ್ಗದ ಮೂಲಕ ಪಕ್ಕದ ಗುಂಡಿಗೆ ನೀರು ಹೋಗಿ ಬೀಳುತ್ತದೆ. ಬಲಗಡೆ ಆನೆ ಹೊಂಡದ ಕಡೆಯಿಂದ ಬರುವ ನೀರು ಕಾಣದೇ ಪುಷ್ಕರಣಿಯ ನೀರಿನ ಜೊತೆಗೆ, ಬೆರೆತು ಬರುತ್ತಿದೆ.

**- ಕೆ. ಸಿರಾಜ್ ಅಹಮ್ಮದ್,** ಸಂತೇಬೆನ್ನೂರು


## ನಗರ ದೇವತೆ ದುಗ್ಗಮ್ಮನ ದೇವಸ್ಥಾನದಲ್ಲಿ ಪ್ರತಿದಿನವೂ ದಾಸೋಹ



ದಾವಣಗೆರೆ, ಅ.7- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ನವರಾತ್ರಿ ಉತ್ಸವದ ಒಂಭತ್ತು ದಿನಗಳ ಕಾಲ ದಾಸೋಹ ನಡೆಯಲಿದೆ.

ದೇವಸ್ಥಾನದ ಧರ್ಮದರ್ಶಿಗಳ ಟ್ರಸ್ಟ್ ಗೌರವಾಧ್ಯಕ್ಷರೂ ಆದ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ನಿರ್ದೇಶನದ ಮೇರೆಗೆ ಭಕ್ತಾದಿಗಳಿಗೆ ಪ್ರತಿದಿನವೂ ದಾಸೋಹ ಏರ್ಪಡಿಸಲಾಗಿದೆ ಎಂದು ಟ್ರಸ್ಟಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ಚೌಡೇಶ್ವರಿಗೆ ಅರಿಶಿನ-ಕುಂಕುಮ ಅಲಂಕಾರ



ದಾವಣಗೆರೆ, ಅ. 7- ನಗರದ ದಾವಲ್ ಪೇಟೆಯಲ್ಲಿರುವ ತೊಗಟವೀರ ಸಮಾಜದ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಶ್ರೀ ಚೌಡೇಶ್ವರಿ ಅಮ್ಮನವರಿಗೆ ನವರಾತ್ರಿ ಮೊದಲ ದಿನವಾದ ಇಂದು ಅರಿಶಿನ-ಕುಂಕುಮ ವಿಶೇಷ ಅಲಂಕಾರ ಮಾಡಲಾಗಿತ್ತು.

## ಎಸ್.ಓ.ಜಿ ಕಾಲೋನಿಯಲ್ಲಿ ನವರಾತ್ರಿ



ದಾವಣಗೆರೆ, ಅ.7 - ಎಸ್.ಓ.ಜಿ ಕಾಲೋನಿಯಲ್ಲಿರುವ ಕರ್ಮಫಲದಾತ ಶ್ರೀ ಶನೈಶ್ಚರ ಸ್ವಾಮಿಯ ದೇವಸ್ಥಾನದಲ್ಲಿ ನವರಾತ್ರಿಯ ಪ್ರಯುಕ್ತ ಶ್ರೀ ಕೊಪ್ಪದಮ್ಮ, ಶ್ರೀ ಚೌಡೇಶ್ವರಿ ದೇವಿಯರ ಘಟ ಸ್ಥಾಪನೆ ಹಾಗೂ ನಿರಂತರ ಜ್ಯೋತಿ ಹಾಕಲಾಗಿದ್ದು, ಸಂಜೆ ದೇವಿ ಮಹಾತ್ಮೆ ಪುರಾಣವನ್ನು ಏರ್ಪಡಿಸಲಾಗಿದೆ.

# ಪ್ರಾಂಶುಪಾಲೆ, ಶಿಕ್ಷಕರ ಹತ್ಯೆ

## ಐದು ದಿನಗಳಲ್ಲಿ ಏಳು ನಾಗರಿಕರ ಹತ್ಯೆ ಮಾಡಿದ ಉಗ್ರರು

ಶ್ರೀನಗರ, ಅ. 7 – ಕಾಶ್ಮೀರ ಕಣಿವೆಯಲ್ಲಿ ಪ್ರಾಂಶುಪಾಲೆ ಹಾಗೂ ಶಿಕ್ಷಕರೊಬ್ಬರನ್ನು ಉಗ್ರರು ಗುಂಡಿಟ್ಟು ಹತ್ಯೆಗೈದಿದ್ದಾರೆ. ಕಳೆದ ಐದು ದಿನಗಳಲ್ಲಿ ಉಗ್ರರು ಏಳು ನಾಗರಿಕರನ್ನು ಹತ್ಯೆಗೈದಿದ್ದಾರೆ.

ಏಳು ಜನರಲ್ಲಿ ನಾಲ್ವರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಹಾಗೂ ಆರು ಹತ್ಯೆಗಳನ್ನು ಶ್ರೀನಗರದಲ್ಲಿ ನಡೆಸಲಾಗಿದೆ.

ಶ್ರೀನಗರದ ಈದ್ಗಾದಲ್ಲಿರುವ ಹೈಸ್ಕೂಲ್‌ನ ಪ್ರಾಂಶುಪಾಲೆ ಸುಪಿಂದರ್ ಕೌರ್ ಹಾಗೂ ಶಿಕ್ಷಕ ದೀಪಕ್ ಚಂದ್ ಅವರನ್ನು ಬೆಳಿಗ್ಗೆ 11.15ರ ಸಮಯದಲ್ಲಿ ಹತ್ಯೆ ಮಾಡಲಾಗಿದೆ. ಆನ್‌ಲೈನ್ ಶಿಕ್ಷಣಕ್ಕಾಗಿ ಇವರು ಶಾಲೆಗೆ ಬಂದಿದ್ದರು. ಆ ಸಂದರ್ಭದಲ್ಲಿ ಯಾವುದೇ ವಿದ್ಯಾರ್ಥಿಗಳು ಇರಲಿಲ್ಲ.

ನಿಷೇಧಿತ ಲಷ್ಕರ್ - ಇ – ತೊಯ್ಬಾ ಸಂಘಟನೆಯ ನೆರಳಿನಂತಿರುವ ದಿ ರೆಸಿಸ್ಟೆನ್ಸ್ ಫೋರ್ಸ್ ಈ ಹತ್ಯೆಗಳನ್ನು ನಡೆಸಿರುವುದಾಗಿ ಹೇಳಿದೆ. ಇದಕ್ಕೂ ಮುಂಚೆ ಔಷಧ ಉದ್ಯಮಿಯಾಗಿದ್ದ ಮಖನ್ ಲಾಲ್ ಬಿಂದ್ರೂ ಅವರನ್ನು ಹತ್ಯೆಗೈಯ್ಯಲಾಗಿತ್ತು. ಇದೇ ವೇಳೆ ಬಂಡಿಪೊರದಲ್ಲಿ ಮಹೊಮ್ಮದ್ ಶಫಿ ಲೋನ್ ಹತ್ಯೆ ಮಾಡಲಾಗಿತ್ತು.

ಇದಕ್ಕೂ ಮುಂಚೆ ಶನಿವಾರದಂದು ಮಜಿದ್ ಅಹಮದ್ ಗೋರಿ ಹಾಗೂ ಮೊಹಮ್ಮದ್ ಶಫಿ ದರ್ ಅವರನ್ನು ಕಣಿವೆಯಲ್ಲಿ ಹತ್ಯೆ ಮಾಡಲಾಗಿತ್ತು. 1990ರಲ್ಲಿ ಉಗ್ರರು ನಾಗರಿಕರನ್ನು ಹತ್ಯೆಗೆ ಗುರಿ ಮಾಡುತ್ತಿದ್ದರು. ಇದು ಕಾಶ್ಮೀರಿ ಪಂಡಿತರು ಕಣಿವೆ ಬಿಟ್ಟು ವಲಸೆ ಹೋಗಲು ಕಾರಣವಾಗಿತ್ತು. ಜನವರಿ ನಂತರ 30 ನಾಗರಿಕರನ್ನು ಹತ್ಯೆ ಮಾಡಲಾಗಿದೆ.

## ಕುಂದೂರು : ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ತಾಲ್ಲೂಕು ಕುಂದೂರು ವಿತರಣಾ ಕೇಂದ್ರದಿಂದ ಸರಬರಾಜಾಗುವ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಪೂರೈಕೆ ಇರುವುದಿಲ್ಲ.

## ರುದ್ರಾಕ್ಷಿಬಾಯಿ ಅವರಿಗೆ ಪ್ರಶಸ್ತಿ ಪ್ರದಾನ



ಹರಿಹರ,ಅ.7 - ಬೆಂಗಳೂರಿನ ಜಿ.ಎಮ್. ರಿಜಾಯ್ಸ್‌ನಲ್ಲಿ ನಡೆದ 'ಹೈಬ್ರಿಡ್ ನ್ಯೂಸ್' 2 ನೇ ವರ್ಷದ ವಾರ್ಷಿಕೋತ್ಸವ ಸಂಭ್ರಮ ಸಮಾರಂಭ ದಲ್ಲಿ, ನಗರದ ಜಾನಪದ ಕಲಾವಿದರೂ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರೂ ಆದ ಶ್ರೀಮತಿ ರುದ್ರಾಕ್ಷಿಬಾಯಿ ಪುಟ್ಟಾನಾಯ್ಕ್ ಅವರನ್ನು 'ಕನ್ನಡ ಮಾಣಿಕ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು.


SCIENCE ACADEMY (R.)
(A UNIQUE CENTRE FOR P.U. CLASSES)
# 307 / 2B, I FLOOR, 2ND MAIN, P.J. EXTN, NEAR STADIUM, DAVANGERE – 4
ADMISSION STARTED FOR
II PUC SCIENCE PCMB TUTIONS
(THEORY + KCET)
Classes start from 25th October 2021
You just pay fee for Theory Tutions and Get free CET Coaching
For more Details contact: Office: 08192 – 257546, Mobile: 9980368779, 9448178087
We don't have any other branches in Davangere in the name of Academy






ದಾವಣಗೆರೆ ದಕ್ಷಿಣ ಕ್ಷೇತ್ರದ ಜನಪ್ರಿಯ ಶಾಸಕರು
ಹಾಗೂ ಮಾಜಿ ಸಚಿವರಾದ
ಡಾ|| ಶಾಮನೂರು ಶಿವಶಂಕರಪ್ಪಾಜಿ
ಹಾಗೂ ಜನಪ್ರಿಯ ಮಾಜಿ ಸಚಿವರಾದ
ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರ
ಜನಪರ ಕಾಳಜಿ ಮೇರೆಗೆ
ಉಚಿತ ಆರೋಗ್ಯ ತಪಾಸಣೆ ಶಿಬಿರ
ಉಚಿತ ಸೇವೆಗಳು : ರಕ್ತ ಪರೀಕ್ಷೆ, ಎಕ್ಸ್‌ರೇ, ಇಸಿಜಿ, ಸಿಟಿ ಸ್ಕ್ಯಾನ್

ದಿನಾಂಕ 08 ಮತ್ತು 09-10-2021ರವರೆಗೆ
ಸಮಯ : ಬೆಳಿಗ್ಗೆ 8 ರಿಂದ ಸಂಜೆ 5 ರವರೆಗೆ
ಸ್ಥಳ : ಎಸ್.ಎಸ್. ಹೈಟೆಕ್ ಆಸ್ಪತ್ರೆ, ದಾವಣಗೆರೆ.
ಸಾರ್ವಜನಿಕರು ಈ ಶಿಬಿರವನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಲಾಗಿದೆ.
ಎ. ನಾಗರಾಜ್
ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.
ಕಡ್ಡಾಯವಾಗಿ ಆಧಾರ್ ಕಾರ್ಡ್ ತರತಕ್ಕದ್ದು.



ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ.ಸಿದ್ದಲಿಂಗನಗೌಡ್ರು, ಯು.ಬೇವಿನಹಳ್ಳಿ
ತಾಲ್ಲೂಕು ಪಂಚಾಯತಿ ಮಾಜಿ ಸದಸ್ಯರು,
ಉಚ್ಚಂಗಿದುರ್ಗ, ವಿಜಯನಗರ ಜಿಲ್ಲೆ ಹರಪನಹಳ್ಳಿ
(ತಾ), ಯು.ಬೇವಿನಹಳ್ಳಿ ವಾಸಿ

ವಿಜಯನಗರ ಜಿಲ್ಲೆ ಹರಪನಹಳ್ಳಿ (ತಾ),
ಯು.ಬೇವಿನಹಳ್ಳಿ ವಾಸಿ
ಲಿಂ|| ಶ್ರೀ. ಕೆ. ಸಿದ್ದಲಿಂಗನಗೌಡ್ರು
ಇವರ ಧರ್ಮಪತ್ನಿ ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು
ಮಾಡುವ ವಿಜ್ಞಾಪನೆಗಳು.
ದಿನಾಂಕ 09/10/2021ನೇ ಶನಿವಾರದಂದು ಬೆಳಗ್ಗೆ 8:30 ಗಂಟೆಗೆ
ನನ್ನ ಪೂಜ್ಯ ಪತಿಯವರ ಪ್ರಥಮ ವರ್ಷದ ಪುಣ್ಯಸ್ಮರಣೆಯನ್ನು,
ಶ್ರೀ ಡಾ|| ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು,
ಪಟ್ಟಾಧ್ಯಕ್ಷರು ಶಾಖಾ ಮಠ ಸಾಣೆಹಳ್ಳಿ
ಇವರ ದಿವ್ಯ ಸಾನಿಧ್ಯದಲ್ಲಿ ಲಿಂಗೈಕ್ಯರ ಸ್ವಗೃಹದಲ್ಲಿ ನೆರವೇರಿಸಲು
ಗುರು–ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು
ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು,
ಶ್ರೀ ಕೆ. ಕೆಂಚನಗೌಡ್ರು ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು,
ಮೊಮ್ಮಕ್ಕಳು, ಯು.ಬೇವಿನಹಳ್ಳಿ ಗ್ರಾಮಸ್ಥರು
ಹಾಗೂ ಬಂಧು–ಮಿತ್ರರು.
ಶ್ರೀ ರೇವಣಸಿದ್ದೇಶ್ವರ ಸ್ಟೋನ್ ಕ್ರಷರ್,
ಯು.ಬೇವಿನಹಳ್ಳಿ, ಹರಪನಹಳ್ಳಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte